ಗೋವಿಂದರಾಜ್ ಬೂದಗುಂಪಾ ಸಾರಥ್ಯದಲ್ಲಿ....

GB NEWS ಕನ್ನಡ

SEARCHING OF TRUTH...............

ಕರ್ನಾಟಕ ಪ್ರಾದೇಶಿಕ ಡಿಜಿಟಲ್ ಪತ್ರಿಕೆ- ಪ್ರತಿ ಸೋಮವಾರ ನಿಮ್ಮ ಮುಂದೆ

02-Disember-2024





# ರಾಜಕೀಯದಲ್ಲಿ ಕಣ್ಮರೆಯಾದ ಸಿವಿಸಿ, ಫೀನಿಕ್ಸ್ ಹಕ್ಕಿಯಂತೆ ಹೊರ ಬರುತ್ತಿರುವ "ಬಸವರಾಜ್ ಕ್ಯಾವಟರ್"





## ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ತಣ್ಣೀರು ಎರಚಿದ ಸಿಎಂ ಸಿದ್ದರಾಮಯ್ಯ

## ಅಮೆರಿಕ ಆಡಳಿತಕ್ಕೆ ಸರ್ಜರಿ ಫಿಕ್ಸ್ ಮಾಡಿದ ಡೊನಾಲ್ಡ್ ಟ್ರಂಪ್ : ಎಲಾನ್ ಮಸ್ಕ್ ವಿವೇಕ್ ರಾಮಸ್ವಾಮಿಗೆ ಹೊಣೆ





## ಚುನಾವಣೆಯಲ್ಲಿ ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಯಾರು? ಇಲ್ಲಿದೆ ನೋಡಿ ಸತ್ಯ

# ರಾಜಕೀಯದಲ್ಲಿ ಕಣ್ಮರೆಯಾದ ಸಿವಿಸಿ, ಫೀನಿಕ್ಸ್ ಹಕ್ಕಿಯಂತೆ ಹೊರ ಬರುತ್ತಿರುವ "ಬಸವರಾಜ್ ಕೆ"

**ಡಾಕ್ಟರ್ ಬಸವರಾಜ್ ಕ್ಯಾವಟರ್ ಅವರು ತಮ್ಮದೇ ಒಡೆತನದ ಕೆ ಎಸ್ ಆಸ್ಪತ್ರೆಯಲ್ಲಿ ಕಾರ್ಯಕರ್ತರನ್ನು ಒಟ್ಟುಗೂಡಿಸಿಕೊಂಡು ನಿತ್ಯ ಒಂದಲ್ಲ ಒಂದು ಸಭೆಗಳನ್ನು ಮಾಡುತ್ತಲೇ ಇರುತ್ತಾರೆ, ರಾಜ್ಯದಲ್ಲಿ ನಡೆಯುತ್ತಿರುವ ಬ್ರಷ್ಟಾಚಾರದ ಬೆಳವಣಿಗೆಗಳನ್ನು ಜನರಿಗೆ ಹೇಗೆ ಮುಟ್ಟಿಸಬೇಕು ಮತ್ತು ಕಾಂಗ್ರೆಸ್ ಅನ್ನು ಯಾವ ರೀತಿ ಅಣಿಯಬೇಕು ಅನ್ನುವುದರ ಬಗ್ಗೆ ತಮ್ಮದೇ ಕಾರ್ಯಕರ್ತರ ಪಡೆಯನ್ನ ಕಟ್ಟಿಕೊಂಡಿರುವ ಬಸವರಾಜ್ ಕ್ಯಾವೆಟರ್ ಅವರು ತಮ್ಮ ಕಾರ್ಯಕರ್ತರೊಂದಿಗೆ ದಿನನಿತ್ಯ ಚರ್ಚಾಕೂಟವನ್ನು ತಮ್ಮ ಕಚೇರಿಯಲ್ಲಿಯೇ ನಡೆಸುತ್ತಾ ಒಂದು ರೀತಿ ತಮ್ಮ ಕಚೇರಿಯನ್ನೇ ಬಿಜೆಪಿ ಕಚೇರಿ ತರ ಮಾಡಿಕೊಂಡಿದ್ದಾರೆ ಅನ್ನುವ ಸುದ್ದಿ ಬಲ್ಲಮೂಲಗಳಿಂದ ಕೊಪ್ಪಳ ತುಂಬಾ ಹರಿದಾಡುತ್ತಿದೆ.**



## ಪ್ರಾಮಾಣಿಕ ನಿಸ್ವಾರ್ಥ ಕಾರ್ಯಕರ್ತರು ಇರುವ ಬಿಜೆಪಿಗೆ ಬಸವರಾಜ್ ಕ್ಯಾವೆಟರ್ ಸೂಕ್ತ:

**ಗೋವಿಂದರಾಜ್ ಬೂದಗುಂಪಾ :**

ರಾಜ್ಯದಲ್ಲಿ ಸಾಕಷ್ಟು ಆಡಳಿತ ವಿರೋಧಿ ಅಲೆ ಸೃಷ್ಟಿಯಾಗುತ್ತಿದ್ದರೂ ಕೂಡ ಕೊಪ್ಪಳದಲ್ಲಿ ರಾಜಕೀಯ ವಲಯದಲ್ಲಿ ನಿಧಾನಗತಿಯ ಚಲನೆ ಇದೆ, ವಿರೋಧಪಕ್ಷವಾಗಿ ಗುರುತಿಸಿಕೊಂಡಿರುವ ಬಿಜೆಪಿ ಅಷ್ಟೊಂದು ಪರಿಣಾಮಕಾರಿಯಾಗಿ ಕೊಪ್ಪಳದಲ್ಲಿ ಹೆಜ್ಜೆಯನ್ನಿಡುತ್ತಿಲ್ಲ. ಕಾರ್ಯಕರ್ತರಲ್ಲಿ ಉತ್ಸಾಹದ ಕೊರತೆ ಕಾಣುತ್ತಿದೆ, ಮತ್ತು ಆಡಳಿತದ ಪಕ್ಷದ ವಿರುದ್ಧ ಸರಿಯಾದ ಪರಿಣಾಮಕಾರಿಯಾದ ಹೆಜ್ಜೆಯನ್ನ ಇಡುವಲ್ಲಿ ವಿಫಲವಾಗುತ್ತಿದೆ, ಕೇವಲ ಪತ್ರಿಕಾಗೋಷ್ಠಿ ನಾಮಕಾವಸ್ತೆ ಪ್ರತಿಭಟನೆಗಳಿಗೆ ಮಾತ್ರ ಸೀಮಿತವಾಗಿದೆ, ಜಿಲ್ಲಾ ಆಡಳಿತದಲ್ಲಿ ಸಾಕಷ್ಟು ಲೋಪಗಳು ಕಂಡುಬಂದರೂ ಕೂಡ ಅವುಗಳನ್ನು ಎತ್ತಿ ತೋರಿಸುವ ಚಾಕಚಕ್ಯತೆ ಕೊಪ್ಪಳ ಬಿಜೆಪಿಯಲ್ಲಿ ಇಲ್ಲದಂತಾಗಿತ್ತು, ಆದರೆ ಮರುಭೂಮಿಯಲ್ಲಿ ಓಯಾಸಿಸ್ ಯಾವ ರೀತಿ ಸಿಗುತ್ತೋ ಅದೇ ರೀತಿ ಈಗ ಕೊಪ್ಪಳ ಬಿಜೆಪಿಯಲ್ಲಿ ಫಿನಿಕ್ಸ್ ಹಕ್ಕಿಯಂತೆ ಡಾಕ್ಟರ್ ಬಸವರಾಜ ಕ್ಯಾವೆಟರ್ ಅವರು ಮುಂಚೂಣಿಗೆ ಬರುತ್ತಿರುವುದು ಎದ್ದು ಕಾಣುತ್ತಿದೆ.



**ಮೂರು ಬಾರಿ ಸತತವಾಗಿ ಶಾಸಕರಾಗಿರುವ ಹಿಟ್ನಾಳ್ ಅವರನ್ನು ಎದುರಿಸುವ ಶಕ್ತಿ ಅಷ್ಟು ಸುಲಭದ್ದಲ್ಲ**



ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಬಾರಿ ರಾಘವೇಂದ್ರ ಹಿಟ್ನಾಳ್ ಅವರು ಶಾಸಕರಾಗುವ ಮುಖಾಂತರ ಹ್ಯಾಟ್ರಿಕ್ ಹೀರೋ ಎಂದೇ ಗುರುತಿಸಿಕೊಂಡಿದ್ದಾರೆ, ಮತ್ತು ಅವರಿಗೆ ಪ್ರತಿಸ್ಪರ್ಧಿಯಾಗಿದ್ದ ಸಂಗಣ್ಣ ಕರಡಿ ಅವರು ಕೂಡ ಈಗ ಇಟ್ನಾಳ್ ಅವರ ಪಡಸಾಲೆಯಲ್ಲಿ ಕೂಡುವಂತಾಗಿದೆ, ಇದರಿಂದ ರಾಘವೇಂದ್ರ ಹಿಟ್ನಾಳ್ ಅವರಿಗೆ ಸರಿಯಾದ ಪ್ರತಿಸ್ಪರ್ಧಿ ಕೊಪ್ಪಳದಲ್ಲಿ ಇಲ್ಲದಂತಹ ವಾತಾವರಣ ಸೃಷ್ಟಿಯಾಗಿತ್ತು. ಮತ್ತು ಅಷ್ಟೊಂದು ಸುಲಭವಾಗಿ ರಾಘವೇಂದ್ರ ಹಿಟ್ನಾಳ್ ಅವರನ್ನು ಸೋಲಿಸುವ ತಾಕತ್ತು ಇರುವ ವ್ಯಕ್ತಿ ಪ್ರತಿಪಕ್ಷದಲ್ಲಿ ಇಲ್ಲ ಅನ್ನುವುದು ಜನಸಾಮಾನ್ಯರಿಗೆ ಎದ್ದು ಕಾಣುತ್ತಿದೆ, ಆದರೆ ಮೂರು ಬಾರಿ ಗೆದ್ದಿರುವ ಮದಗಜ ಎಂದೇ ಖ್ಯಾತಿ ಪಡೆದ ರಾಘವೇಂದ್ರ ಹಿಟ್ನಾಳ್ ಅವರಿಗೆ ಪ್ರತಿಸ್ಪರ್ಧಿಯಾಗಿ ಮುಂದೆ ಯಾರು ಬರಬಹುದು ಅನ್ನುವುದಕ್ಕೆ ಉತ್ತರ ಜನಸಾಮಾನ್ಯರಿಗೆ ಸಿಗಬೇಕಾಗಿದೆ.

ಈ ಹಿಂದೆ ಹಲವು ಚುನಾವಣೆಗಳಲ್ಲಿ ರಾಘವೇಂದ್ರ ಹಿಟ್ನಾಳ್ ಅವರಿಗೆ ಸರಿಯಾದ ಪ್ರತಿಸ್ಪರ್ದಿ ಸಿ.ವಿ ಚಂದ್ರಶೇಖರ್ ಎಂದೆ ಹೆಸರುವಾಸಿಯಾಗಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಸಿವಿಚಂದ್ರಶೇಖರ್ ಅವರು ರಾಜಕೀಯ ರಂಗದಲ್ಲಿ ಅಷ್ಟೊಂದು ಕಾಣಿಸಿಕೊಳ್ಳುತ್ತಿಲ್ಲ, ಅವರಲ್ಲಿ ರಾಜಕೀಯ ಜಿಜ್ಞಾಸೆ ಉಂಟಾಗಿರುವ ಲಕ್ಷಣಗಳು ಕಾಣುತ್ತಿವೆ, ಮತ್ತು ಜನರಿಂದ ದೂರವಾಗಿರುವ ಸಿವಿಚಂದ್ರಶೇಖರ್ ಅವರನ್ನು ಕೊಪ್ಪಳದ ಮತದಾರರು ಕೂಡ ನೆನಪಿನಿಂದ ಅಳಿಸಿ ಹಾಕುತ್ತಿದ್ದಾರೆ, ಯಾಕೆಂದರೆ ಅದಕ್ಕೆ ಕಾರಣ ಫೀನಿಕ್ಸ್ ಹಕ್ಕಿಯಂತೆ ಹೊರ ಒಮುತ್ತಿರುವ "ಬಸವರಾಜ್ ಕ್ಯಾವೆಟರ್"

ಈ ಹಿಂದೆ ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡಿದ್ದ ಡಾಕ್ಟರ್ ಬಸವರಾಜ ಕ್ಯಾವೆಟರ್ ಅವರ ಬಗ್ಗೆ ಸಾಕಷ್ಟು ಗಾಸಿಪ್ಗಳು ಸೃಷ್ಟಿಯಾಗಿದ್ದವು, ಅವರ ವಿರುದ್ಧ ಮತ್ತು ಅವರ ಆರೋಗ್ಯ ಸಂಸ್ಥೆಯ ವಿರುದ್ಧ ಸಾಕಷ್ಟು ಆರೋಪಗಳು ಕೇಳಿಬಂದಿದ್ದವು. ಇದರ ನಡುವೆ ಬಸವರಾಜ್ ಕ್ಯಾವಟರ್ ಅವರು ಲೋಕಸಭಾ ಚುನಾವಣೆಯಲ್ಲಿ ಕೇವಲ 35,000 ಅಂತರದಲ್ಲಿ ಮಾತ್ರ ಸೋತರು ಇದು ಬಿಜೆಪಿ ಪಕ್ಷಕ್ಕೆ ಬಲ ಇದೆ ಅನ್ನುವುದನ್ನು ತೋರಿಸುತ್ತದೆ.

ಆದರೆ ಪ್ರಸಕ್ತ ದಿನಗಳ ಈ ರಾಜಕಾರಣದಲ್ಲಿ ಬಸವರಾಜ್ ಕ್ಯಾವಟರ್ ಅವರು ಸಂಪೂರ್ಣ ಬದಲಾದ ರಾಜಕಾರಣಿ ತರ ಕಾಣುತ್ತಿದ್ದಾರೆ, ಯಾವ ರೀತಿ ಅಂದರೆ ಬಿಜೆಪಿಯಲ್ಲಿ ಇರುವ ಪ್ರಾಮಾಣಿಕ ನಿಸ್ವಾರ್ಥ ಕಾರ್ಯಕರ್ತರನ್ನು ತಮ್ಮೊಂದಿಗೆ ಕರೆದುಕೊಂಡು ಸದಾ ಒಂದಲ್ಲ ಒಂದು ಸಭೆಗಳನ್ನು ಮಾಡುತ್ತಾ ಸಪ್ಪೆಯಾಗಿದ್ದ ಬಿಜೆಪಿ ಪಕ್ಷವನ್ನು ಚೈತನ್ಯಗೊಳಿಸಿದ್ದಾರೆ, ಮತ್ತು ಸಾಮಾನ್ಯ ಮತದಾರರನ್ನು ಕೂಡ ತುಂಬಾ ಆತ್ಮೀಯವಾಗಿ ಮಾತನಾಡಿಸುತ್ತಾರೆ, ಅವರ ಆರೋಗ್ಯ ಸಂಸ್ಥೆಯ ವಿರುದ್ಧ ಇದ್ದ ಹಲವು ಆರೋಪಗಳಿಗೆ ಅವರ ಸಂಸ್ಥೆಯಿಂದಲೇ ಜನಸಾಮಾನ್ಯರಿಗೆ ಆಸರೆಯಾಗಿ ಸರಿಯಾದ ಉತ್ತರ ನೀಡುತ್ತಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಇವರು ಮಾತುಗಾರಿಕೆಯಲ್ಲಿ ಅಷ್ಟೊಂದು ನುರಿತಿರಲಿಲ್ಲ, ಆದರೆ ಈಗ ಪಕ್ಕ ಬಿಜೆಪಿಯ ರಾಜಕಾರಣಿ ಯಾವ ರೀತಿ ಇರಬೇಕು ಆ ರೀತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೊರಹೊಮ್ಮುತ್ತಿದ್ದಾರೆ. ಸಾರ್ವಜನಿಕ ಭಾಷಣ ಮಾಡಲು ನಿಂತರೆ ತಾಸುಗಟ್ಟಲೆ ಜನರ ಮನಮುಟ್ಟುವಂತೆ ಮಾತನಾಡುವ ಕೌಶಲ್ಯ ಕೂಡ ಬೆಳೆಸಿಕೊಂಡಿದ್ದಾರೆ.

ದಿನವೂ ಕಾರ್ಯಕರ್ತರೊಂದಿಗೆ ಕಾಲ ಕಳೆಯುತ್ತಾ ಬಿಜೆಪಿಯ ಸಂಘಟನೆಗೆ ಒತ್ತುಕೊಟ್ಟು ಕೆಲಸ ಮಾಡುತ್ತಿರುವುದು ನೋಡಿದರೆ ಡಾ. ಬಸವರಾಜ್ ಕ್ಯಾವೆಟರ್ ರಾಘವೇಂದ್ರ ಹಿಟ್ನಾಳ್ ಅವರಿಗೆ ವಿಧಾನಸಭೆಯಲ್ಲಿ ಪಕ್ಕ ಪ್ರತಿಸ್ಪರ್ಧಿಯಾಗಿ ಹೊರ ಒಮ್ಮುವದರಲ್ಲಿ ಎರಡು ಮಾತಿಲ್ಲ ಅಂತ ಕ್ಷೇತ್ರದಲ್ಲಿ ಜನ ಮಾತನಾಡಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ

# ಅಂಬೇಡ್ಕರ್ ಸಂಸತ್ತು ಪ್ರವೇಶಿಸದಂತೆ ತಡೆದವರು ಯಾರು? ಅಸಲಿ ಸತ್ಯ ಇಲ್ಲಿದೆ ನೋಡಿ.



## ಬುದ್ಧಿವಂತ ದಲಿತರನ್ನು ತುಳಿಯುತ್ತಲೇ ಬಂದಿದೆ ಕಾಂಗ್ರೆಸ್

**ಗೋವಿಂದರಾಜ್ ಬೂದಗುಂಪಾ**

ಇತ್ತೀಚಿಗೆ ಹುಟ್ಟಿಕೊಂಡಿರುವ ಕೆಲವು ಕಮ್ಯುನಿಸ್ಟರು ಅವರು ಯಾರು ಎಂದರೆ ಜಿ ರಾಮಕೃಷ್ಣ, ಬರಗೂರು ರಾಮಚಂದ್ರಪ್ಪ, ಸಿದ್ದನಗೌಡ ಪಾಟೀಲ, ಇತ್ತೀಚಿಗೆ ಅಂಬೇಡ್ಕರ್ ಸಂಚಿಕೆಗಳನ್ನು ಹೊರ ತರುತ್ತಿದ್ದಾರೆ, ಆದರೆ ಇವರು ಈಗ ಅಂಬೇಡ್ಕರ್ ಅವರನ್ನು ನೆನಪು ಮಾಡಿಕೊಳ್ಳುತ್ತಿದ್ದಾರೆ, 1951ರ ಜನರಲ್ ಎಲೆಕ್ಷನ್ ನಲ್ಲಿ ಅಂಬೇಡ್ಕರ್ ಅವರು ಸ್ಪರ್ಧೆ ಮಾಡಿದಾಗ ಬಾಂಬೆ ನಲ್ಲಿ ಇವರ ವಿರುದ್ಧ ಕ್ಯಾಂಡಿಡೇಟ್ ಹಾಕಿದವರು ಯಾರು? ಇದೇ ಕಮ್ಯುನಿಸ್ಟ್ ಪಕ್ಷ ಅವರ ವಿರುದ್ಧ ಕ್ಯಾಂಡಿಡೇಟ್ ಹಾಕಿತ್ತು, ಅದು ಬ್ರಾಹ್ಮಣ ಜಾತಿಯ ಶ್ರೀಪಾದ್ ಡಾಂಗೆ ಅನ್ನುವ ವ್ಯಕ್ತಿಯನ್ನು ಇದೇ ಕಮ್ಯುನಿಸ್ಟ್ ಅಂಬೇಡ್ಕರ್ ಅವರ ವಿರುದ್ಧ 1951 ರ ಜನರಲ್ ಎಲೆಕ್ಷನ್ ನಲ್ಲಿ ಎದುರಾಳಿಯಾಗಿ ಸ್ಪರ್ಧೆ ಮಾಡಿಸಿತ್ತು.

ಕಮ್ಯುನಿಸ್ಟ್ ಅಭ್ಯರ್ಥಿಗೆ ಇಂದಿನಿಂದ ಬ್ಯಾಕ್ ಸಪ್ಪೋರ್ಟ್ ಆಗಿ ಕಾಂಗ್ರೆಸ್ ಬೆಂಬಲ ನೀಡಿ ಅಂಬೇಡ್ಕರ್ ಅವರನ್ನು ಸೋಲುವಂತೆ ಮಾಡಿ ಶ್ರೀಪಾದ್ ದಾಂಗೆ ಅವರನ್ನು ಗೆಲ್ಲುವಂತೆ ಮಾಡಿತು,

ಒಂದು ಸಾರಿ ಕೃಪಲಾನಿ ಅವರು ಒಂದು ಮಾತು ಹೇಳುತ್ತಾರೆ ಸಂಸತ್ತಿಗೆ ಈ ಮೂರು ಜನ ಹೋಗಲೇ ಬೇಕಾಗಿತ್ತು ಅದು ಯಾರು ಅಂದರೆ ಲೂಹಿಯಾ ಮತ್ತು ಡಾಕ್ಟರ್ ಬಿ ಆರ್ ಅಂಬೇಡ್ಕರ್ ಇನ್ನೊಬ್ಬರು ದೀನ ದಯಾಳ್ ಉಪಾಧ್ಯಾಯ ಅದು ಕೃಪಲಾನಿಯವರು ಅಂದು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಆಗಿದ್ದರು.

ಈ ದೇಶಕ್ಕೆ ಯಾರು ಸಂವಿಧಾನ ಕೊಟ್ಟರೋ ಆ ಸಂವಿಧಾನದ ಅಡಿಯಲ್ಲಿ ರಚನೆಯಾದ ಸಂಸತ್ತಿಗೆ ಹೋಗದಂತೆ ಅಂಬೇಡ್ಕರ್ ಅವರನ್ನೇ ತಡೆಯಲಾಯಿತು ಅಂದರೆ ಎಂತಹ ದುರಾದೃಷ್ಟ ತಡೆದಂತ ಶಕ್ತಿಗಳು ಯಾವು ಅನ್ನುವುದು ಜಗಜ್ಜಾಯಿರ ಯಾಕೆಂದರೆ ಆಗ ಇದ್ದಿದ್ದೆ ಎರಡು ಪಕ್ಷ ಅದರಲ್ಲಿ ಕಾಂಗ್ರೆಸ್ ಭಾರತದಲ್ಲಿ ಕಾಂಗ್ರೆಸ್ ಮೆಜಾರಿಟಿ ಪಕ್ಷವಾಗಿ ಹೊರಹೊಮ್ಮುತ್ತಿತ್ತು ಆದರೆ ಅಂಬೇಡ್ಕರ್ ಅವರಿಗೆ ಎಂದೂ ಕೂಡ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲ ಬದಲಾಗಿ ಅವರನ್ನು ಸಂಸತ್ತಿಗೆ ಬರದಂತೆ ತಡೆಹಿಡಿಯುವ ಕೆಲಸವನ್ನು ನೆಹರು ಪ್ರೇರಣೆತ ಕಾಂಗ್ರೆಸ್ ಚಾಚು ತಪ್ಪದೇ ಮಾಡುತ್ತಾ ಬಂತು,

ಕೊನೆಗೂ ಅಂಬೇಡ್ಕರ್ ಅವರು ಸಂಸತ್ ಪ್ರವೇಶ ಮಾಡಿದರು ಆದರೆ ಅವರನ್ನು ಎಕನಾಮಿಕ್ ಮಿನಿಸ್ಟರ್ ಮಾಡಬೇಕಾಗಿತ್ತು. ಅದನ್ನ ಬಿಟ್ಟು ಅವರನ್ನು ಲಾ ಮಿನಿಸ್ಟರ್ ಮಾಡಲಾಯಿತು, ಆಗ ಅಂಬೇಡ್ಕರ್ ಅವರು ಇಂದು ಕೋಡ್ ಬಿಲ್ ಅನ್ನು ತರುತ್ತಾರೆ ಅದು ಹಿಂದೂ ಹೆಣ್ಣುಮಕ್ಕಳ ವಿಷಯವಾಗಿ ಮಂಡಿಸ್ತಾರೆ ಇದಕ್ಕೆ ಆಧಾರವಾಗಿ ಅವರು ತೆಗೆದುಕೊಂಡಿದ್ದು ನಮ್ಮ ದೇಶದ ಸ್ಮೃತಿಗಳನ್ನೇ ಹೊರತು ಮತ್ತ್ಯಾವುದೂ ಅಲ್ಲ,

ಸ್ಮೃತಿಗಳಲ್ಲಿ ಹೆಣ್ಣು ಮಕ್ಕಳ ಪರವಾಗಿ ಆಸ್ತಿ ವಾದ ವಿಷಯವನ್ನು ಕೋಟ್ ಮಾಡಿ ಸಂಸತ್ತಿನಲ್ಲಿ ಅಂಬೇಡ್ಕರ್ ಮಂಡಿಸುತ್ತಾರೆ,

ಅಂಬೇಡ್ಕರ್ ಅವರು ಸ್ಮೃತಿಗಳನ್ನು ಸುಟ್ಟರು ಅಂತ ಹೇಳುವ ಕೆಲವು ಜನರು ಅದೇ ಸ್ಮೃತಿಗಳನ್ನ ಇಟ್ಟುಕೊಂಡು ಹಿಂದೂ ಕೋಡ್ ಬಿಲ್ ಮಾಡಿದರ ಬಗ್ಗೆ ಹೇಳುವುದಿಲ್ಲ, ಸಂಸ್ಕೃತದಲ್ಲಿ ಇರುವಂತಹ ಸ್ಮೃತಿಗಳನ್ನೇ ಆಧಾರವಾಗಿಟ್ಟುಕೊಂಡು ಹೆಣ್ಣು ಮಕ್ಕಳ ಆಸ್ತಿ ಕಾನೂನುಗಳನ್ನ ರೂಪಿಸಿದ ಅಂಬೇಡ್ಕರ್ ಅವರನ್ನು ಸಂಸ್ಕೃತ ವಿರೋಧಿ ಅನ್ನುವ ಈ ಕಮ್ಯುನಿಸ್ಟರು ಹೊಸ ಇತಿಹಾಸ ಬರೆಯಲು ಹೊರಟಿದ್ದಾರೆ, ಅಂಬೇಡ್ಕರ್ ಅವರು ಸಂಸ್ಕೃತ ವಿರೋಧಿಯೇ ಆಗಿದ್ದರೆ ಸಂಸ್ಕೃತದಲ್ಲಿ ಇದ್ದ ಸ್ಮೃತಿಗಳನ್ನ ಕಾನೂನು ರಚನೆಗೆ ಯಾಕೆ ಆಧಾರವಾಗಿಟ್ಟುಕೊಳ್ಳುತ್ತಿದ್ದರು ಅನ್ನುವ ಪ್ರಶ್ನೆ ಮೂಡುತ್ತದೆ.

## ಅಂಬೇಡ್ಕರ್ ಸಂಸ್ಕೃತ ವಿರೋಧಿಯೇ?

ಅಂಬೇಡ್ಕರ್ ಅವರಿಗೆ ಸಂಸ್ಕೃತ ಬರುತ್ತಿರಲಿಲ್ಲವಾ ಅನ್ನುವ ಪ್ರಶ್ನೆ ಮೂಡುತ್ತೆ ಆದರೆ ಶಾಲಾ ದಿನಗಳಲ್ಲಿ ಅವರಿಗೆ ಕಲಿಯಲು ಅವಕಾಶ ಸಿಗಲಿಲ್ಲ ಮುಂದೆ ಅವರು ಸಾಂಸ್ಕೃತವನ್ನು ಕಲಿತು ಅಧ್ಯಯನ ಮಾಡಿ ಸಂಸ್ಕೃತವನ್ನ ಒಂದು ಉನ್ನತ ಮಟ್ಟಕ್ಕೆ ಒಯ್ಯುವಂತಹ ಕೆಲಸವನ್ನು ಸ್ವತಹ ಅಂಬೇಡ್ಕರ್ ಅವರು ಮಾಡಿದ್ದರು.

ನಿಜವಾಗಲೂ ಅಂಬೇಡ್ಕರ್ ಅವರಿಗೆ ಗೌರವ ಕೊಡುವುದಾದರೆ ಮೂಲ ಸಂವಿಧಾನದ ಪ್ರಿಯಾಂಬಲ್ ಅನ್ನೇ ಓದಬೇಕು, ಸೆಕ್ಯುಲರಿಸಂ ಮತ್ತು ಸೋಶಿಯಲಿಸಂ ಅಂಬೇಡ್ಕರ್ ಅವರ ಮೂಲ ಸಂವಿಧಾನದಲ್ಲಿ ಇಲ್ಲವೇ ಇಲ್ಲ ಅದನ್ನು ಈ ಲಜ್ಜೆಗೆಟ್ಟ ಕಾಂಗ್ರೆಸ್ ಅದರಲ್ಲಿ ತುರಿಕೆದೆ.

ಎಂಐಸಿ ಗಳಲ್ಲಿ ಅಂಬೇಡ್ಕರ್ ಅವರ ಫೋಟೋ ಹಾಕುವುದಕ್ಕೂ ಜಗಳ ನಡೆದಿದೆ ಈ ದೇಶದಲ್ಲಿ.

ಯಾಕೆಂದರೆ ಅಂಬೇಡ್ಕರ್ ಅವರ ಮಾತುಗಳು ನೇರವಾಗಿದ್ದವು ಮತ್ತು ಸ್ಪಷ್ಟವಾಗಿದ್ದವು. ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ನೇತಾಜಿ ಮತ್ತು ಇಂಡಿಯನ್ ಆರ್ಮಿ ಇಂದ ಅನ್ನುವ ಸ್ಪಷ್ಟತೆ ಅಂಬೇಡ್ಕರ್ ಅವರಲ್ಲಿ ಇತ್ತು ಇದನ್ನು ಅಂದಿನ ಕಾಂಗ್ರೆಸ್ ಸಹಿಸಿಕೊಳ್ಳಲಿಲ್ಲ.

## ಗ್ರೇಟ್ ಎಕನಾಮಿಸ್ಟ್ ಆಗಿದ್ದ ಅಂಬೇಡ್ಕರ್ ಫೋಟೋ ನೋಟುಗಳ ಮೇಲೆ ಏಕಿಲ್ಲ?

**ಆರ್‌ಬಿಐ ನೋಟ್ಗಳನ್ನ ಮುದ್ರಿಸುವಾಗ ರೂಪಾಯಿಗೆ ಮೌಲ್ಯಗಳನ್ನು ನಿರ್ಧರಿಸುವಾಗ ಅಂಬೇಡ್ಕರ್ ಅವರ ಸಲಹೆಯನ್ನ ಸ್ವತಹ ಆರ್‌ಬಿಐ ಕೇಳಿಕೊಂಡಿತ್ತು ಆದರೆ ನೋಟು ಮುದ್ರಣ ಆದಮೇಲೆ ಅದರಲ್ಲಿ ಗಾಂಧಿ ಫೋಟೋ ಯಾಕೆ ಬಂತು ಅನ್ನೋದು ಜವಾಹರ್ ಲಾಲ್ ನೆಹರು ಪ್ರೇರಿತ ಕಾಂಗ್ರೆಸ್ಗೆ ಗೊತ್ತು,**





## ಅಂಬೇಡ್ಕರ್ ಮತ್ತು ಹಿಂದೂ ಧರ್ಮ ಹಾಗೂ ರಾಷ್ಟ್ರೀಯತೆ

**ಅಂಬೇಡ್ಕರ್ ಅವರಿಗೆ ಸಮಯ ಸಿಕ್ಕಾಗಲೆಲ್ಲಾ ರಾಷ್ಟ್ರೀಯತೆಯನ್ನೇ ಎತ್ತಿ ಹಿಡಿದಿದ್ದಾರೆ ಎಲ್ಲೂ ಕೂಡ ಹಿಂದೂ ಧರ್ಮದ ಅವಹೇಳನ ಮಾಡಲಿಲ್ಲ ಅದರ ಬದಲಾಗಿ ಹಿಂದೂ ಧರ್ಮದಲ್ಲಿದ್ದ ಮೌಲ್ಯಗಳನ್ನ ಸಂವಿಧಾನದ ಮುಖಾಂತರ ಸ್ವಚ್ಛಗೊಳಿಸುವ ಪ್ರಯತ್ನ ಮಾಡಿದರು,**

**1954 ಆಗಸ್ಟ್ 26 ನೇ ತಾರೀಕ ರಾಜ್ಯಸಭೆಯಿಂದ ಮಾತನಾಡಿದ ಡಾಕ್ಟರ್ ಬಿ ಆರ್ ಅಂಬೇಡ್ಕರ್ " ರಷ್ಯಾ ಸ್ವಾತಂತ್ರ್ಯ ಕೊಡುವಂತಹ ದೇಶ ಅಲ್ಲ ಅದು ಮಹಾ ರಾಕ್ಷಸ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವವರನ್ನು ಬಡಿದು ಬಾಯಿಗೆ ಹಾಕಿಕೊಳ್ಳುವಂತಹ ಮಹಾ ರಾಕ್ಷಸ ಎಂದು ಬಣ್ಣಿಸಿದ್ದರು ಆದ್ದರಿಂದ ಇಲ್ಲಿಯ ಕಮ್ಯುನಿಸ್ಟ್ರಿಗೆ ಅಂಬೇಡ್ಕರ್ ಅಂದರೆ ಅಷ್ಟೊಂದು ಕಷ್ಟ ಅದಕ್ಕಾಗಿ ಅವರನ್ನು ಆ ಎಲೆಕ್ಷನ್ ನಲ್ಲಿ ಸೋಲಿಸಲಾಯಿತು.**

**ಅದಕ್ಕೋಸ್ಕರ ಪಾರ್ಲಿಮೆಂಟ್ ಇನಲ್ಲಿ ಅವರ ಮಾತುಗಳಿಗೆ ಅಡ್ಡಿಪಡಿಸಿದರು, ಅವರ ಪ್ರೆಸ್ ಮೇಲೆ ದಾಳಿ ಮಾಡಿ ಇಡೀ ಪ್ರಸನ್ನೇ ಸುಡಲಾಯಿತು, ಇಂಥವರು ವಾಕ್ ಸ್ವಾತಂತ್ರ್ಯ ಮತ್ತು ಜರ್ನಲಿಸಂ ಬಗ್ಗೆ ಕಥೆ ಹೇಳಲು ಬರುತ್ತಾರೆ.**

**ಅಂಬೇಡ್ಕರ್ ಅವರಿಗೆ ಒಂದು ಗಟ್ಟಿ ನಿಲುವು ಇತ್ತು ಅದು ಏನೆಂದರೆ ಪ್ರಜಾಪ್ರಭುತ್ವ ಮತ್ತು ಕಮ್ಯೂನಿಸಂ ಒಂದೇ ಸಮನಾಗಿ ನಿಲ್ಲಲು ಸಾಧ್ಯವೇ ಇಲ್ಲ ಆದ್ದರಿಂದ ಭಾರತ ಮತ್ತು ರಷ್ಯಾ ಒಗ್ಗಟ್ಟಾಗಿ ಹೋಗಲು ಕೂಡ ಸಾಧ್ಯವಿಲ್ಲ ಎಂದು ವಿದೇಶಾಂಗ ನೀತಿಯಲ್ಲಿ ರಷ್ಯಾ ಮತ್ತು ಭಾರತದ ಕುರಿತಾಗಿ ಬದಲಾವಣೆಯನ್ನ ತಂದಿದ್ದರು ಅಂಬೇಡ್ಕರ್ ಇದು ಇಲ್ಲಿಯ ಕಮ್ಯುನಿಸ್ಟ್ರು ಮತ್ತು ಅದರ ಹಿಂದೆ ಇರುವಂತಹ ಕಾಂಗ್ರೆಸ್ ಗೆ ನುಂಗಲಾರದ ತುತ್ತಾಗಿತ್ತು.**

# ಆನ್‌ಲೈನ್ ಶಾಪಿಂಗ್ ಕಾನೂನು,

## ಎಲ್ಲಿ ಪ್ರಕರಣ ಹೂಡಬೇಕು?

**ಆನ್ಲೈನ್ ಶಾಪಿಂಗ್ ಗಳಲ್ಲಿ ನಡೆಯುವ ಫ್ರಾಡ್ ಗಳನ್ನು ಯಾವ ರೀತಿ ನಿರ್ವಹಿಸಬೇಕು ಎಲ್ಲೋ ಕುಳಿತು ನಮಗೆ ಮಾರಾಟ ಮಾಡುವ ವ್ಯಕ್ತಿಗಳ ಮೇಲೆ ಯಾವ ರೀತಿ ನಿಯಂತ್ರಣ ಸಾಧಿಸಬೇಕು**




## ಆನ್‌ಲೈನ್ ಶಾಪಿಂಗ್ ಕಾನೂನುಗಳು ನೋಡುವುದಾದರೇ

1. ಗ್ರಾಹಕ ಸಂರಕ್ಷಣಾ ಕಾಯ್ದೆ, 2019, ಇದು ಆನ್‌ಲೈನ್ ಶಾಪಿಂಗ್ ಸೇರಿದಂತೆ ಗ್ರಾಹಕರ ಹಕ್ಕುಗಳನ್ನು ರಕ್ಷಿಸುತ್ತದೆ.
2. ಮಾಹಿತಿ ತಂತ್ರಜ್ಞಾನ ಕಾಯಿದೆ, 2000, ಇದು ಇ-ಕಾಮರ್ಸ್ ಸೇರಿದಂತೆ ಆನ್‌ಲೈನ್ ವಹಿವಾಟುಗಳನ್ನು ನಿಯಂತ್ರಿಸುತ್ತದೆ.
3. ಪಾವತಿ ಮತ್ತು ಸೆಟಲ್ಮೆಂಟ್ ಸಿಸ್ಟಮ್ಸ್ ಆಕ್ಟ್, 2007, ಇದು ಆನ್‌ಲೈನ್ ಪಾವತಿ ವ್ಯವಸ್ಥೆಗಳನ್ನು ನಿಯಂತ್ರಿಸುತ್ತದೆ.

ಭಾರತದಲ್ಲಿ, ಆನ್‌ಲೈನ್ ಶಾಪಿಂಗ್ ಪ್ರಕರಣವನ್ನು ಸಲ್ಲಿಸಲು ನ್ಯಾಯಾಲಯದ ನ್ಯಾಯವ್ಯಾಪ್ತಿಯು ಹಲವಾರು ಅಂಶಗಳ ಮೇಲೆ ಅವಲಂಬಿತವಾಗಿದೆ, ಅವುಗಳನ್ನು ನೋಡುವುದಾದರೆ.ಗ್ರಾಹಕ ಸಂರಕ್ಷಣಾ ಕಾಯ್ದೆ, 2019 ಪ್ರಕಾರ ಎಲ್ಲಿ ಗ್ರಾಹಕರು ತಮ್ಮ ನಿವಾಸದ ಸ್ಥಳದ ವ್ಯಾಪ್ತಯಲ್ಲಿ ಬರುವ ಗ್ರಾಹಕ ನ್ಯಾಯಾಲಯದಲ್ಲಿ ದೂರು ಸಲ್ಲಿಸಬಹುದು ಅಥವಾ ಗ್ರಾಹಕರು ಮಾರಾಟಗಾರರ ವ್ಯಾಪಾರದ ಸ್ಥಳದಲ್ಲಿಯ ಗ್ರಾಹಕ ನ್ಯಾಯಾಲಯದಲ್ಲಿ ದೂರು ಸಲ್ಲಿಸಬಹುದು.

ಮಾಹಿತಿ ತಂತ್ರಜ್ಞಾನ ಕಾಯಿದೆ, 2000 ಅಡಿಯಲ್ಲಿ ಆನ್‌ಲೈನ್ ವಂಚನೆ ಅಥವಾ ಹ್ಯಾಕಿಂಗ್‌ನಂತಹ ಸೈಬರ್‌ಕ್ರೈಮ್‌ಗೆ ಸಂಬಂಧಿಸಿದ ಪ್ರಕರಣಗಳಲ್ಲಿ, ಸರ್ಕಾರವು ಸ್ಥಾಪಿಸಿದ ಸೈಬರ್‌ಕ್ರೈಮ್ ಸೆಲ್‌ಗಳಿಗೆ ದೂರುಗಳನ್ನು ಸಲ್ಲಿಸಬಹುದು.

ಭಾರತದಲ್ಲಿ, ಸಿವಿಲ್ ನ್ಯಾಯಾಲಯದಲ್ಲಿ ಆನ್‌ಲೈನ್ ಶಾಪಿಂಗ್ ಪ್ರಕರಣವನ್ನು ಸಲ್ಲಿಸುವಾಗ, ಈ ಕೆಳಗಿನ ನಿಯಮಗಳು ಮತ್ತು ವಿಭಾಗಗಳಲ್ಲಿ ಸಲ್ಲಿಸಬಹುದಾಗಿದೆ, ಆರ್ಡರ್ VII ನಿಯಮ 1 ಸಿವಿಲ್ ಪ್ರೊಸೀಜರ್ ಕೋಡ್ (CPC), 1908.

ಆರ್ಡರ್ VII ನಿಯಮ 1 CPC, 1908 ಪ್ರಕಾರ ನೋಡುವುದಾದರೇ, ಈ ನಿಯಮವು "ದೂರು ನಿರಾಕರಣೆ" ಯೊಂದಿಗೆ ವ್ಯವಹರಿಸುತ್ತದೆ ಮತ್ತು ನ್ಯಾಯಾಲಯವು ಒಂದು ವೇಳೆ ದೂರು ತಿರಸ್ಕರಿಸುತ್ತದೆ ಎಂದು ಹೇಳುತ್ತದೆ.

CPC ಯ ಕಲಂ 26, 1908 ಅಡಿಯಲ್ಲಿ ಈ ವಿಭಾಗವು "ಮೊಕದ್ದಮೆ ಹೂಡುವ ಸ್ಥಳ" ದೊಂದಿಗೆ ವ್ಯವಹರಿಸುತ್ತದೆ ಮತ್ತು ಅವರ ನ್ಯಾಯವ್ಯಾಪ್ತಿಯ ಸ್ಥಳೀಯ ಮಿತಿಯೊಳಗೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಸಲ್ಲಿಸಬಹುದು ಎಂದು ಹೇಳುತ್ತದೆ.




## ಪ್ರಮುಖ ಪ್ರಕರಣಗಳು ನೋಡುವುದಾದರೇ

1) ಫ್ಲಿಪ್‌ಕಾರ್ಟ್ ಇಂಟರ್ನೆಟ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಅಶುತೋಷ್ ಬನ್ಸಾಲ್* (2019).
2) ಸೋಹನ್ ಲಾಲ್ ನಾರಾಯಣದಾಸ್ ವರ್ಸಸ್ ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್* (2019).

ಆನ್‌ಲೈನ್ ಶಾಪಿಂಗ್ ವೇಗವಾಗಿ ಬಹುತೇಕರು ಕೊಳ್ಳುವ ಕ್ಷೇತ್ರವಾಗಿದೆ ಮತ್ತು ಕಾನೂನುಗಳು ಮತ್ತು ನಿಯಮಗಳು ನಿರಂತರವಾಗಿ ಹೊಸ ತಂತ್ರಜ್ಞಾನಗಳು ಮತ್ತು ವ್ಯವಹಾರ ಮಾದರಿಗಳಿಗೆ ಹೊಂದಿಕೊಳ್ಳುತ್ತವೆ. ಆನ್‌ಲೈನ್ ಶಾಪಿಂಗ್ ಕಾನೂನಿನಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಸದಾ ಗಮನಿಸಿ.



**ವಿಜಯ ಅಮೃತರಾಜ್.**
**ವಕೀಲರು,ನಂದಿ ನಗರ (ಉತ್ತರ)**
**ಕೊಪ್ಪಳ - 583231.**
**99458 73626.**

# ಪ್ರಗತಿಗೆ ಬೇಕು ಬಂಡವಾಳ

## ಮೇಕೆದಾಟು ಸಮೀಪ ಅಣೆಕಟ್ಟು| ಮಹದಾಯಿ ಕಳಸಾ ಬಂಡೂರಿ ಯೋಜನೆಗಳಿಗೆ ಅನುಮತಿ ನೀಡಲು ಪ್ರಧಾನಿ ಮೋದಿಗೆ ಮನವಿ





### ವಿಶೇಷ ಅನುದಾನಕ್ಕೆ ಶಿಫಾರಸು

ತೆರಿಗೆ ಹಂಚಿಕೆಯಲ್ಲಿ ರಾಜ್ಯದ ಪಾಲನ್ನು ಶೇ.1ರಷ್ಟು ಕಡಿಮೆ ಮಾಡಿರುವ ಶಿಫಾರಸ್ಸನ್ನು ಹಣಕಾಸು ಇಲಾಖೆ ಸರಿಪಡಿಸಬೇಕಾಗಿದೆ. ಹಣಕಾಸು ಆಯೋಗ ರಾಜ್ಯಕ್ಕೆ ಹಂಚಿಕೆ ಕಡಿಮೆಯಾಗಿರುವುದಕ್ಕೆ ಪರಿಹಾರವಾಗಿ 5,495 ಕೋಟಿ ರೂ. ಅನುದಾನ ಬಿಡುಗಡೆಗೆ ಮತ್ತು ಪೆರಿಫೆರಲ್ ರಿಂಗ್ ರಸ್ತೆ ಮತ್ತು ನೀರಿನ ಮೂಲಗಳ ಪುನರುಜ್ಜೀವಕ್ಕೆ 6,000 ಕೋಟಿ ರೂ. ವಿಶೇಷ ಅನುದಾನ ನೀಡುವ ಬಗ್ಗೆ ಶಿಫಾರಸು ಮಾಡಿದೆ. ಹಣಕಾಸು ಆಯೋಗ ಕನಿಷ್ಟ ಈ ಎರಡು ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕಾಗಿದೆ. ನಾವು ಇನ್ನೂ 15ನೇ ಹಣಕಾಸು ಆಯೋಗದ ಅವಧಿಯಲ್ಲಿರುವುದರಿಂದ ರಾಜ್ಯಕ್ಕೆ ಹೆಚ್ಚುವರಿ ಅನುದಾನ ಒದಗಿಸಲು ಹಣಕಾಸು ಇಲಾಖೆಗೆ ನಿರ್ದೇಶನ ನೀಡುವಂತೆ ಪುನಃ ಮನವಿ ಮಾಡುತ್ತೇನೆಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

### ನಬಾರ್ಡ್ ನೆರವು ಹೆಚ್ಚಿಸಲು ಮನವಿ

ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಪ್ರಸಕ್ತ ಸಾಲಿನಲ್ಲಿ ರಾಜ್ಯಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದು ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ. 2023-24ರ ಸಾಲಿಗೆ 5,600 ಕೋಟಿ ಮಂಜೂರು ಮಾಡಲಾಗಿತ್ತು, ಆದರೆ, 2024-25ರ ಸಾಲಿಗೆ 2,340 ಕೋಟಿ ಮಂಜೂರು ಮಾಡಲಾಗಿದೆ, ಇದರಿಂದಾಗಿ ನಬಾರ್ಡ್ ನೆರವು ಪ್ರಸಕ್ತ ಸಾಲಿಗೆ ಶೇ.58ರಷ್ಟು ಕಡಿತವಾದಂತಾಗಿದೆ. ರಾಜ್ಯ ಹೆಚ್ಚುವರಿ ಬಡ್ಡಿ ಸಹಾಯಧನ ನೀಡದಿದ್ದರೆ ರೈತಾಪಿ ವರ್ಗದ ಆರ್ಥಿಕ ಮಟ್ಟದ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ, ರಾಜ್ಯದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ, ಆದ್ದರಿಂದ ಈ ಕೂಡಲೇ ಇದನ್ನು ಪುನರ್ ಪರಿಶೀಲಿಸಿ ನಬಾರ್ಡ್ ನೆರವು ಹೆಚ್ಚಿಸಲು ಹಣಕಾಸು ಸಚಿವಾಲಯಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಸಿಎಂ, ಡಿಸಿಎಂ ಮನವಿ ಮಾಡಿದ್ದಾರೆ.

ಕೃಷ್ಣರಾಜ ಜಲಾಶಯಕ್ಕೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟೆ ನಿರ್ಮಾಣ, ಮಹದಾಯಿ -ಇ ಯೋಜನೆಗಳಿಗೆ ಅನುಮತಿ ದೊರೆಕಿಸಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಹೆಚ್ಚಿನ ಬಂಡವಾಳ: ಕರ್ನಾಟಕ ಅತ್ಯಂತ ವೇಗವಾಗಿ ನಗರೀಕರಣಗೊಳ್ಳುತ್ತಿರುವ ರಾಜ್ಯವಾಗಿದ್ದು, 13 ನಗರಪಾಲಿಕೆಗಳನ್ನು ಹೊರತುಪಡಿಸಿ 2ನೇ ಸ್ಥರದ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ನೀಡಿ ಎಂದು ಕೋರಿದ್ದಾರೆ.

ಅನುಮತಿಗೆ ಕೋರಿಕೆ: ಕೇಂದ್ರದಿಂದ ಬರಬೇಕಿರುವ ಅನುದಾನ ಸೇರಿದಂತೆ ರಾಜ್ಯದ ಅಭಿವೃದ್ಧಿ ಯೋಜನೆಗಳ ಪಟ್ಟಿಯನ್ನೇ ಹೊಸದಿಲ್ಲಿಯಲ್ಲಿಂದು ಪ್ರಧಾನಿ ಅವರಿಗೆ ಉಭಯ ನಾಯಕರು ಸಲ್ಲಿಸಿ, ಕುಡಿವ ನೀರಿನ ಯೋಜನೆಗೆ ಅಗತ್ಯವಿರುವ ಮೇಕೆದಾಟು ಹಾಗೂ ಕಳಸಾ-ಬಂಡೂರಿಗೆ ಜಲಸಂಪನ್ಮೂಲ ಮತ್ತುಪರಿಸರ ಇಲಾಖೆಯಿಂದ ಅನುಮತಿ ಕೊಡಿಸಿ ಎಂದುಮನವಿಯಲ್ಲಿ ಕೋರಿದ್ದಾರೆ.

ಕಡಿತ ಬೇಡ: 16ನೇ ಹಣಕಾಸು ಆಯೋಗದ ಅವಧಿಯಲ್ಲಿ ಕೇಂದ್ರದ ತೆರಿಗೆ ಪಾಲಿಗೆ ಹೆಚ್ಚಿನ ದೇಣಿಗೆ ಒದಗಿಸುವ ರಾಜ್ಯಗಳಿಗೆ, ಕೇಂದ್ರದ ತೆರಿಗೆ ಪಾಲಿನಲ್ಲಿ ಭಾರೀ ಕಡಿತ ಮಾಡಿ ಶಿಕ್ಷಿಸದಂತೆ ಹಣಕಾಸು ಇಲಾಖೆ ಖಾತ್ರಿ ಪಡಿಸಬೇಕೆಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ

## ಮೂಲಸೌಕರ್ಯಕ್ಕೆ 10 ಕೋಟಿ

**ರಾಜ್ಯ ಸರ್ಕಾರ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಮುಂದಿನ ಮೂರು ವರ್ಷಗಳ ಅವಧಿಗೆ 2,000 ಕೋಟಿ ರೂ. ತೆಗೆದಿರಿಸಿದೆ. ಆದರೆ, ಈ ನಗರಗಳಿಗೆ ಸಮಗ್ರ ಮೂಲಸೌಕರ್ಯ ಕಲ್ಪಿಸಲು ಅನುದಾನ ಸಾಕಾಗುವುದಿಲ್ಲ. ಆದ್ದರಿಂದ ಅಮೃತ್ ಅಥವಾ ಇನ್ನಾವುದೇ ಯೋಜನೆಯಡಿ ಕರ್ನಾಟಕಕ್ಕೆ 10,000 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರ ನಗರಾಭಿವೃದ್ಧಿ ಇಲಾಖೆಗೆ ತಾವು ನಿರ್ದೇಶನ ನೀಡಬೇಕು. 15ನೇ ಹಣಕಾಸು ಆಯೋಗ ಕರ್ನಾಟಕ ರಾಜ್ಯಕ್ಕೆ ಸರಿಯಾದ ನ್ಯಾಯ ಒದಗಿಸುತ್ತಿಲ್ಲ ಎಂದು ಸಿಎಂ,ಡಿಸಿಎಂ ತಿಳಿಸಿದ್ದಾರೆ.**



## ತೆರಿಗೆ ಪಾಲು ಕಡಿತ ಬೇಡ

**ಭದ್ರಾ ಮೇಲ್ದಂಡೆ ಯೋಜನೆಗೆ 2023-24ರ ಕೇಂದ್ರ ಬಜೆಟ್‌ನಲ್ಲಿ ಅನುಮೋದನೆಯಾಗಿರುವ 5,300 ಕೋಟಿ ಅನುದಾನ ಬಿಡುಗಡೆ ಮಾಡುವ ಕೇಂದ್ರ ಹಣಕಾಸು ಸಚಿವರ ಭರವಸೆ ಇದುವರೆಗೆ ಈಡೇರಿಲ್ಲ. ಪ್ರಸಕ್ತ ಯೋಜನೆ ಶೀಘ್ರ ಅನುಮೋದನೆಗೊಂಡಲ್ಲಿ ಭದ್ರಾ ಮೇಲ್ದಂಡ ಯೋಜನೆ ವ್ಯಾಪ್ತಿಗೆ ಒಳಪಡುವ ಮಧ್ಯ ಕರ್ನಾಟಕದ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಅನುಕೂಲವಾಗಲಿದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.**



# ತಾಜ್ ಮಹಲ್ ನ ಸರಿಯಾದ ಇತಿಹಾಸ ಪ್ರಕಟಿಸಲು ಕೋರ್ಟ್ ಮೊರೆ



## ಅರ್ಜಿಯ ಪ್ರಮುಖ ಅಂಶಗಳು

ತಾಜ್ ಮಹಲ್‌ನ ಸರಿಯಾದ ಇತಿಹಾಸ ಪ್ರಕಟಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ತಾಜ್ ಮಹಲ್ ಮೂಲತಃ ರಾಜಾ ಮಾನ್ ಸಿಂಗ್ ಅವರ ಅರಮನೆಯಾಗಿದ್ದು, ಅದನ್ನು ಮೊಘಲ್ ಚಕ್ರವರ್ತಿ ಷಹಜಹಾನ್ ನವೀಕರಿಸಿದರು ಎಂದು ಹಿಂದೂ ಸೇನೆಯ ಅಧ್ಯಕ್ಷ ಸುರ್ಜಿತ್ ಸಿಂಗ್ ಯಾದವ್ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

ತಾಜ್ ಮಹಲ್ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹಾಸಿಕ ತಪ್ಪು ಸಂಗತಿಗಳನ್ನು ಇತಿಹಾಸದ ಪುಸ್ತಕಗಳಿಂದ ತೆಗೆದುಹಾಕಬೇಕು ಮತ್ತು ರಾಜ ಮಾನ್ ಸಿಂಗ್ ಅರಮನೆಯ ಅಸ್ತಿತ್ವ ಮತ್ತು ಅದರ ಕಾಲಮಾನ ಕುರಿತು ತನಿಖೆ ನಡೆಸಲು ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ತನಿಖೆ ನಡೆಸಲು ನಿರ್ದೇಶನ ನೀಡಬೇಕು.ಈ ಹಿನ್ನೆಲೆಯಲ್ಲಿ ಎಎಸ್‌ಐ, ಕೇಂದ್ರ ಸರ್ಕಾರ, ಭಾರತದ ರಾಷ್ಟ್ರೀಯ ದಾಖಲೆಗಳು ಮತ್ತು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಅವರು ಕೋರಿದ್ದಾರೆ.

ಅರ್ಜಿಯು ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರಿರುವ ಪೀಠದ ಮುಂದೆ ಇಂದು (ಶುಕ್ರವಾರ) ವಿಚಾರಣೆಗೆ ಬರುವ ಸಾಧ್ಯತೆಯಿದೆ.

• ತಾಜ್ ಮಹಲ್ ಬಗ್ಗೆ ಅರ್ಜಿದಾರ ಆಳವಾದ ಅಧ್ಯಯನ ಮತ್ತು ಸಂಶೋಧನೆ ನಡೆಸಿದ್ದು ಇತಿಹಾಸದ ವಾಸ್ತವಾಂಶಗಳನ್ನು ಸರಿಪಡಿಸುವುದು ಮತ್ತು ತಾಜ್ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ನೀಡುವುದು ಮುಖ್ಯ.

• ತಾಜ್ ಮಹಲ್ ಕುರಿತು ಹಲವಾರು ಪುಸ್ತಕಗಳನ್ನು ಅರ್ಜಿದಾರ ಪರಿಶೀಲಿಸಿದ್ದು ಒಂದರಲ್ಲಿ ಷಹಜಹಾನ್ ಪತ್ನಿ ಆಲಿಯಾ ಬೇಗಂ ಬಗ್ಗೆ ಹೇಳಲಾಗಿದ್ದು ಮುಮ್ತಾಜ್ ಮಹಲ್ ಬಗ್ಗೆ ಯಾವುದೇ ಉಲ್ಲೇಖ ಇಲ್ಲ .

• ಝುಡ್‌ಎ ದೇಸಾಯಿಯವರ 'ತಾಜ್ ಮ್ಯೂಸಿಯಂ' ಪುಸ್ತಕದಲ್ಲಿ ರಾಜಾ ಮಾನ್ ಸಿಂಗ್ ಅವರ ಅರಮನೆಯಾಗಿದ್ದ ಭವ್ಯ ಮತ್ತು ಸುಂದರವಾದ ಮುಮ್ತಾಜ್ ಮಹಲನ್ನು ಸಮಾಧಿ ಸ್ಥಳವಾಗಿ ಆಯ್ಕೆ ಮಾಡಲಾಗಿದೆ ಎಂದಿದೆ. ಅಂತ್ಯಕ್ರಿಯೆ ಸಮಯದಲ್ಲಿ ಮಾನ್ ಸಿಂಗ್ ಮೊಮ್ಮಗ ರಾಜಾ ಜೈ ಸಿಂಗ್ ವಶದಲ್ಲಿ ತಾಜ್‌ಮಹಲ್ ಇತ್ತು.

• ಈ ಮಹಲನ್ನು ಎಂದಿಗೂ ಕೆಡವಿರಲಿಲ್ಲ.

• ತಾಜ್ ಮಹಲ್‌ನ ಪ್ರಸ್ತುತ ರಚನೆಯು ಈಗಾಗಲೇ ಅಸ್ತಿತ್ವದಲ್ಲಿದ್ದ ರಾಜ ಮಾನ್ ಸಿಂಗ್ ಅವರ ಮಹಲಿನ ನವೀಕೃತ ಸ್ವರೂಪವಾಗಿದೆ.

• ಅಲ್ಲದೆ, ಮುಮ್ತಾಜ್ ಮಹಲ್‌ನ ಮೃತ ದೇಹವನ್ನು ರಾಜಾ ಜೈ ಸಿಂಗ್ ಅವರ ಜಮೀನಿನ ಆವರಣದಲ್ಲಿ ತಾತ್ಕಾಲಿಕ ಗುಮ್ಮಟದಡಿ ಹೂಳಲಾಗಿದೆ ಎಂದು ತಾಜ್ ಮ್ಯೂಸಿಯಂ ಪುಸ್ತಕ ಉಲ್ಲೇಖಿಸುತ್ತದೆ. ತಾಜ್ ಮಹಲ್ ನಿರ್ಮಿಸಲು ರಾಜಾ ಮಾನ್ ಸಿಂಗ್ ಅವರ ಮಹಲು ಕೆಡವಲಾಯಿತು ಎಂದು ಹೇಳುವ ಯಾವುದೇ ದಾಖಲೆಗಳಿಲ್ಲ ಎಂದು ಉಲ್ಲೇಖಿಸುವುದು ಸೂಕ್ತವಾಗಿದೆ,

• ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ತಾಜ್ ಮಹಲ್ ಕುರಿತು ಸಂಘರ್ಷ ಮತ್ತು ವ್ಯತಿರಿಕ್ತ ಮಾಹಿತಿ ನೀಡಿದೆ.

• 1631 ರಲ್ಲಿ ಮುಮ್ತಾಜ್ ಮಹಲ್ ಸಾವನ್ನಪ್ಪಿದ ಆರು ತಿಂಗಳ ನಂತರ, ಆಕೆಯ ದೇಹವನ್ನು ತಾಜ್ ಮಹಲ್‌ನ ಮುಖ್ಯ ಸಮಾಧಿಯಲ್ಲಿ ಹೂಳಲು ಆಗ್ರಾಕ್ಕೆ ವರ್ಗಾಯಿಸಲಾಯಿತು ಎಂದು ಎಎಸ್‌ಐ ಉಲ್ಲೇಖಿಸಿದೆ. ಆದರೆ 1648ರಲ್ಲಿ ಸ್ಮಾರಕಗಳ ಸಂಕೀರ್ಣವನ್ನು ಪೂರ್ಣಗೊಳಿಸಲು 17 ವರ್ಷ ತೆಗೆದುಕೊಂಡಿತು ಎಂದು ASI ಹೇಳಿದ ತಾಜ್ ಮಹಲ್‌ಗೆ ಸಂಬಂಧಿಸಿದ ಅದೇ ಜಾಲತಾಣದಲ್ಲಿ ಒದಗಿಸಲಾದ ಮಾಹಿತಿಗೆ ಇದು ವ್ಯತಿರಿಕ್ತವಾಗಿದೆ.

• ಮುಮ್ತಾಜ್ ಮಹಲ್ ಮೃತ ದೇಹವನ್ನು ಆಕೆಯ 1931ರಲ್ಲಿ ಆಕೆಯ ಮರಣದ ಆರು ತಿಂಗಳ ನಂತರ ತಾಜ್‌ಮಹಲ್‌ನ ಮುಖ್ಯ ಗುಮ್ಮಟದ ಕೆಳಗೆ ಹೂಳಲಾಗಿದೆ ಎನ್ನುವುದಾದರೆ ತಾಜ್‌ಮಹಲ್ 1648ರಲ್ಲಿ ಪೂರ್ಣಗೊಂಡಿತ್ತು ಎನ್ನುವ ಅಂಶಕ್ಕೆ ವ್ಯತಿರಿಕ್ತವಾದಂತಾಗುತ್ತದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

# ಅಮೆರಿಕ ಆಡಳಿತಕ್ಕೆ ಸರ್ಜರಿ ಫಿಕ್ಸ್ ಮಾಡಿದ ಡೊನಾಲ್ಡ್ ಟ್ರಂಪ್

## ಎಲಾನ್ ಮಸ್ಕ್, ವಿವೇಕ್ ರಾಮಸ್ವಾಮಿಗೆ ಹೊಣೆ

### ಅಮೆರಿಕದ ಆಡಳಿತಕ್ಕೆ ದೊಡ್ಡ ಸರ್ಜರಿಯನ್ನೇ ಮಾಡಿಸೋಕೆ ಇಬ್ಬರು ತಜ್ಞರನ್ನು ಆಯ್ಕೆ ಮಾಡಿದ್ದಾರೆ. ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆಸುತ್ತಿರುವ ಉದ್ಯಮಿಗಳಾದ ಎನಾಲ್ ಮಸ್ಕ್ ಮತ್ತು ಭಾರತೀಯ ಮೂಲದ ವಿವೇಕ್ ರಾಮಸ್ವಾಮಿಗೆ ದೊಡ್ಡ ಹೊಣೆಯನ್ನು ಕೊಟ್ಟಿದ್ದಾರೆ

ಡೊನಾಲ್ಡ್ ಟ್ರಂಪ್ ಶ್ವೇತ ಭವನದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯೋಕೆ ಇನ್ನೂ ಎರಡು ತಿಂಗಳು ಇದೆ. ಆಗಲೇ ತಮ್ಮ ಟೀಂಗೆ ಸಮರ್ಥ ಕಟ್ಟಾಳುಗಳನ್ನು ಗುರುತಿಸುತ್ತಿದ್ದಾರೆ. ಈಗಷ್ಟೇ ಪ್ರಕಟಿಸಿರುವ ನಿರ್ಧಾರವು ಅಮೆರಿಕದಲ್ಲಿ ಭಾರೀ ಸಂಚಲನವನ್ನೇ ಮೂಡಿಸಿದೆ. ಅಮೆರಿಕದ ಆಡಳಿತಕ್ಕೆ ದೊಡ್ಡ ಸರ್ಜರಿಯನ್ನೇ ಮಾಡಿಸೋಕೆ ಇಬ್ಬರು ತಜ್ಞರನ್ನು ಆಯ್ಕೆ ಮಾಡಿದ್ದಾರೆ. ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆಸುತ್ತಿರುವ ಉದ್ಯಮಿಗಳಾದ ಎನಾಲ್ ಮಸ್ಕ್ ಮತ್ತು ಭಾರತೀಯ ಮೂಲದ ವಿವೇಕ್ ರಾಮಸ್ವಾಮಿಗೆ ದೊಡ್ಡ ಹೊಣೆಯನ್ನು ಕೊಟ್ಟಿದ್ದಾರೆ.
ರಿಪಬ್ಲಿಕನ್ ನಾಯಕರ ಬಹುಕಾಲದ ಆಶಯವನ್ನು ಟ್ರಂಪ್ ಈಗ ಈಡೇರಿಸಿದ್ದಾರೆ. 'ಡಾಜ್' ಅಥವಾ ಡಿಪಾರ್ಟ್‌ಮೆಂಟ್ ಆಫ್ ಗವರ್ಮೆಂಟ್ ಎಫಿಶಿಯನ್ಸಿ ಹೆಸರಿನ ಹೊಸ ಇಲಾಖೆಯಲ್ಲೇ ಟ್ರಂಪ್ ಸೃಷ್ಟಿಸಿದ್ದಾರೆ. ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಅನುಸರಿಸುತ್ತಿರುವ ರೀತಿಯ ವ್ಯವಸ್ಥೆಯನ್ನು ಅಮೆರಿಕ ಸರಕಾರದಲ್ಲಿ ಅಳವಡಿಸಲು ಮಸ್ಕ್ ಮತ್ತು ರಾಮಸ್ವಾಮಿ ಕಂಕಣ ತೊಟ್ಟು ಕಣಕ್ಕಿಳಿಯಲಿದ್ದಾರೆ. ಆಡಳಿತದಲ್ಲಿ ಆಗುತ್ತಿರುವ ವಿಪರೀತ ಖರ್ಚನ್ನು ಕಡಿತಗೊಳಿಸೋದ್ರಿಂದ ಹಿಡಿದು ಅಧಿಕಾರಿಗಳ ಸಮರ್ಥ ಕಾರ್ಯನಿರ್ಹಣೆಗೆ ಬೇಕಾದ ಎಲ್ಲ ಕ್ರಮಗಳನ್ನೂ ಈ ಇಬ್ಬರು ಸಿರಿವಂತ ಅಮೆರಿಕನ್ನರು ಕೈಗೊಳ್ಳಲಿದ್ದಾರೆ.

ಟ್ರಂಪ್ ಅವರ ಸೇವ್ ಅಮೆರಿಕ ಅಭಿಯಾನವನ್ನು ಕಾರ್ಯಾಚರಣೆಗೆ ತರಲು ಬೇಕಾದ ಎಲ್ಲವನ್ನೂ ಮಾಡುವ ಪವರ್ ಈ ಇಬ್ಬರಿಗೂ ಸಿಗಲಿದೆ. ಇದು ವ್ಯವಸ್ಥೆಯಲ್ಲಿ ಭಾರೀ ಸಂಚಲವನ್ನೇ ಸೃಷ್ಟಿಸಲಿದೆ ಎಂದು ಸ್ವತಃ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ. ಸರಕಾರದ ಹಣವನ್ನು ವ್ಯರ್ಥ ಮಾಡುತ್ತಿರೋರಿಗೆ ಕಡಿವಾಣ ಹಾಕೋದು, ಅತಿಯಾದ ನಿಯಮಗಳನ್ನು ಸಡಿಲಗೊಳಿಸೋದು, ದೇಶದ ಆಡಳಿತ ವ್ಯವಸ್ಥೆಯನ್ನು ಪುನರ್ ರಚಿಸುವ ಹೊಣೆಯನ್ನು 2026ರ ಜುಲೈ 4ರ ಒಳಗೆ ಪೂರೈಸಲು ಡೆಡ್‌ಲೈನ್ ಹಾಕಲಾಗಿದೆ. ಟ್ರಂಪ್ ಪತ್ರದಿಂದ ಮತ್ತಷ್ಟು ಹುರಿದುಂಬಿಸಿಕೊಂಡಿರುವ ವಿವೇಕ್ ರಾಮಸ್ವಾಮಿ ಮತ್ತು ಎನಾನ್ ಮಸ್ಕ್ ಅದಾಗಲೇ ಮೊದಲ ಕಾರ್ಯಾಚರಣೆಗೆ ಕೈಹಾಕಿದ್ದಾರೆ.



## ಸದ್ದು ಮಾಡಿತ್ತು ಅವರ 'ವೋಕ್, ಡಾಟ್ ಇಂಕ್' ಪುಸ್ತಕ

ಭಾರತೀಯ ಮೂಲದ ವಿವೇಕ್ ರಾಮಸ್ವಾಮಿ ಈ ಬಾರಿ ಅಮೆರಿಕ ಅಧ್ಯಕ್ಷೀಯ ಸ್ಥಾನಕ್ಕೆ ಸ್ಪರ್ಧಿಸುವ ನಿರ್ಧಾರ ಮಾಡಿದ್ದರು. ಆದರೆ, ಟ್ರಂಪ್ ಅಖಾಡಕ್ಕೆ ಇಳಿಯೋದು ಖಚಿತವಾಗುತ್ತಿದ್ದಂತೆ ತಮ್ಮ ಅವಕಾಶವನ್ನು ಬಿಟ್ಟುಕೊಟ್ಟರು. ಅಮೆರಿಕದಲ್ಲಿ 'ರೋಯ್ವಂಟ್ ಸೈನ್ಸಸ್' ಹೆಸರಿನ ಫಾರ್ಮಾಸ್ಯೂಟಿಕಲ್ ಕಂಪನಿ ಕಟ್ಟಿದ ವಿವೇಕ್ ಅವರು 100 ಕೋಟಿ ಡಾಲರ್ ಸಂಪತ್ತಿನ ಒಡೆಯ. 39 ವರ್ಷ ವಯಸ್ಸಿನ ವಿವೇಕ್‌ನ ನೇರ ನುಡಿಗಳಿಗೆ ಅಮೆರಿಕನ್ನರು ಬೆಕ್ಕಸಬೆರಗಾಗುತ್ತಾರೆ.

2021ರಲ್ಲಿ 'ವೋಕ್, ಡಾಟ್ ಇಂಕ್' ಎನ್ನುವ ಪುಸ್ತಕ ಅಮೆರಿಕದಲ್ಲಿ ಲೋಕಾರ್ಪಣೆಯಾಯಿತು. ಟೈಮ್ಸ್ ಬೆಸ್ಟ್ ಸೆಲ್ಲರ್ ಪಟ್ಟಿಯಲ್ಲೂ ಈ ಪುಸ್ತಕ ಸ್ಥಾನ ಪಡೆಯಿತು. ಅಂದು ಲೋಕಾರ್ಪಣೆಯಾಗಿದ್ದು ಕೇವಲ ಪುಸ್ತಕವೊಂದೇ ಆಗಿರಲಿಲ್ಲ. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿಯ ಹುಟ್ಟೂ ಆಗಿತ್ತು.

ಭಾರತ ಮೂಲದ ಕಂದು ಬಣ್ಣದ ಅಮೆರಿಕ ಪ್ರಜೆ ವಿವೇಕ್ ರಾಮಸ್ವಾಮಿ ಉದ್ಯಮಿಯಾಗಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಫಾರ್ಮಾ ಕಂಪನಿ ಕಟ್ಟಿದ್ದಾರೆ. ಇತ್ತೀಚೆಗಷ್ಟೇ 'ಟ್ರೂಥ್ಸ್- ದಿ ಫ್ಯೂಚರ್ ಆಫ್ ಅಮೆರಿಕ ಫಸ್ಟ್' ಪುಸ್ತಕವನ್ನು ಹೊರತಂದಿದ್ದಾರೆ. ತಾನು ಒಬ್ಬ ಹಿಂದೂ ಎನ್ನುವುದರ ಬಗ್ಗೆ ಹೆಮ್ಮೆ ಇದೆ ಎನ್ನುವ ಸಂಗತಿಯನ್ನು ಅವರೇ ಹೇಳಿಕೊಂಡಿದ್ದಾರೆ. ಹಾಗೇ ನಾನು ಅಮೆರಿಕದ ದೇಶಭಕ್ತ ಅನ್ನೋದನ್ನೂ ಸಾರಿದ್ದಾರೆ. ಇದೇ ಕಾರಣಕ್ಕಾಗಿಯೇ ಟ್ರಂಪ್ ವಿವೇಕ್‌ರನ್ನು 'ದೇಶಭಕ್ತ' ಎಂದೇ ಕರೆಯುತ್ತಾರೆ.

ವಿವೇಕ್ ರಾಮಸ್ವಾಮಿ ತಂದೆ ತಾಯಿ ತಮಿಳು ಭಾಷಿಕ ಕೇರಳ ಮೂಲದ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. ಇಂಜಿನಿಯರಿಂಗ್ ಪದವಿ ಹೊಂದಿದ್ದ ತಂದೆ ವಿ. ಗಣಪತಿ ರಾಮಸ್ವಾಮಿ ಮತ್ತು ವೈದ್ಯೆ ತಾಯಿ ಗೀತಾ ರಾಮಸ್ವಾಮಿ 4 ದಶಕಗಳ ಹಿಂದೆಯೇ ಉದ್ಯೋಗ ಅರಸಿ ಅಮೆರಿಕಕ್ಕೆ ಬಂದು ಬಿಟ್ಟರು. ಗೀತಾ ರಾಮಸ್ವಾಮಿ ಅವರು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು.

ಇನ್ನು ಎಲಾನ್ ಮಸ್ಕ್ ಯಾರಿಗೆ ಗೊತ್ತಿಲ್ಲಾ? ಇವರು ಜಗತ್ತಿನ ಅತ್ಯಂತ ಸಿರಿವಂತ ವ್ಯಕ್ತಿ. ಇವರ ಸಂಪತ್ತು 30 ಸಾವಿರ ಕೋಟಿ ಡಾಲರ್‌ಗೂ ಹೆಚ್ಚು. ವಿದ್ಯುತ್ ಚಾಲಿತ ಕಾರು ತಯಾರಿಕಾ ಕಂಪನಿ ಟೆಸ್ಲಾದ ಸಿಇಒ, ಬಾಹ್ಯಾಕಾಶ ಯಾನ ಹಾಗೂ ರಾಕೆಟ್, ಸ್ಯಾಟಿಲೈಟ್ ಇಂಟರ್‌ನೆಟ್ ಕಂಪನಿ ಸ್ಪೇಸ್‌ಎಕ್ಸ್‌ನ ಒಡೆಯ. ಸಾಮಾಜಿಕ ಮಾಧ್ಯಮ ಎಕ್ಸ್‌ನ ಅಧ್ಯಕ್ಷ, ಇನ್ನು ಓಪನ್ ಎಐ, ನ್ಯೂರಾಲಿಂಕ್, ದಿ ಬೋರಿಂಗ್ ಕಂಪನಿ ಸೇರಿದಂತೆ ಹಲವು ಕಂಪನಿಗಳ ಸಹ ಸಂಸ್ಥಾಪಕರೂ ಹೌದು. ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರಗಳ ಜೊತೆಗೆ ಅಮೆರಿಕದ ಆಡಳಿತಕ್ಕೂ ಚುರುಕು ಮುಟ್ಟಿಸುವ ಹೊಸ ಟಾಸ್ಕ್‌ನ್ನು ಈಗ ಬೆನ್ನಿಗೇರಿಸಿಕೊಂಡಿದ್ದಾರೆ. ಅಂದಹಾಗೇ ಎಲಾನ್ ಮಸ್ಕ್‌ಗೆ ಈಗ 53 ವರ್ಷ ವಯಸ್ಸು.

### ಅಮೆರಿಕ ಸರಕಾರದ ಖರ್ಚು 6.5 ಟ್ರಿಲಿಯನ್ ಡಾಲರ್

ಸರಕಾರದ ದಕ್ಷತೆಗಾಗಿಯೇ ಹೊಸ ಇಲಾಖೆಯನ್ನು ಸೃಷ್ಟಿಸಲಾಗಿದೆ. ಅಮೆರಿಕದ ಆಡಳಿತ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯೇ ಇದರ ಉದ್ದೇಶವಾಗಿದೆ. ಈ ಇಲಾಖೆಯಲ್ಲಿರುವ ಎಲಾನ್ ಮಸ್ಕ್ ಮತ್ತು ವಿವೇಕ್ ರಾಮಸ್ವಾಮಿ, ಅಮೆರಿಕ ಸರಕಾರಕ್ಕೆ ಹೊರಗಿನಿಂದಲೇ ಮಾರ್ಗದರ್ಶನ ಹಾಗೂ ಸಲಹೆಗಳನ್ನು ಕೊಡಲಿದ್ದಾರೆ. ಆದರೆ, ಸರಕಾರದ ದಕ್ಷತೆಯ ಇಲಾಖೆಯು ಶ್ವೇತ ಭವನ, ಆಫೀಸ್ ಆಫ್ ಮ್ಯಾನೇಜ್ಮೆಂಟ್ ಹಾಗೂ ಸರಕಾರದ ಬಜೆಟ್ ಜೊತೆಗೆ ಭಾಗಿಯಾಗಿರುತ್ತದೆ. ಅಮೆರಿಕದ ಇತಿಹಾಸದಲ್ಲಿಯೇ ಹಿಂದೆಂದೂ ಕಾಣದ ಆಡಳಿತದ ಪುನರ್ ರಚನೆ ಹಾಗೂ ಉದ್ಯಮಶೀಲ ಗುಣಗಳ ಅನುಸಂಧಾನ ನಡೆಯಲಿದೆ.

ಸರಕಾರದ ಇಲಾಖೆಗಳು, ಅಧಿಕಾರಿ ವರ್ಗದಲ್ಲಿ ಸಾಮರ್ಥ್ಯ ಮತ್ತು ದಕ್ಷತೆಯನ್ನು ಹೆಚ್ಚಿಸುವ ಜೊತೆಗೆ ಅಮೆರಿಕನ್ನರ ಬದುಕನ್ನು ಮತ್ತಷ್ಟು ಹಸನುಗೊಳಿಸುವ ಕಾರ್ಯವನ್ನು ಈ ಜೋಡಿಯು ನೆರವೇರಿಸಲಿದೆ. ಪ್ರಸ್ತುತ ಅಮೆರಿಕ ಸರಕಾರವು ಪ್ರತಿ ವರ್ಷ 6.5 ಟ್ರಿಲಿಯನ್ ಡಾಲರ್, ಅಂದ್ರೆ ಸುಮಾರು 548 ಲಕ್ಷ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಿದೆ. ಇದರಲ್ಲಿ ಹಗರಣಗಳು, ವ್ಯರ್ಥ ಖರ್ಚುಗಳೂ ಇವೆ ಅನ್ನೋದು ಟ್ರಂಪ್ ವಾದ. ಆರ್ಥಿಕತೆ ಮತ್ತು ಜನರ ಹಣವನ್ನು ಉಳಿಸುವ ಮೂಲಕ ಅಮೆರಿಕದ ಜನರಿಗೆ 250ನೇ ಸ್ವಾತಂತ್ರ್ಯ ಸಂಭ್ರಮದ ವಿಶೇಷ ಉಡುಗೊರೆಯನ್ನು ಮಸ್ಕ್-ರಾಮಸ್ವಾಮಿ ಜೋಡಿಯು ಕೊಡಲಿದ್ದಾರೆ ಎಂದು ಟ್ರಂಪ್ ಅಪಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಭಾರೀ ನಿರಾಸೆ ಮೂಡಿಸಿದ ಸಿಎಂ ಸಿದ್ದರಾಮಯ್ಯ




ಸಿದ್ದರಾಮಯ್ಯನವರ ಸಂಪುಟದಲ್ಲಿ ಭಾರೀ ಬದಲಾವಣೆಯಾಗಲಿದೆ, ಹಲವು ಸಚಿವರ ತಲೆದಂಡವಾಗಲಿದೆ, ಇನ್ನಷ್ಟು ಶಾಸಕರು ಸಂಪುಟಕ್ಕೆ ಸೇರಲಿದ್ದಾರೆ ಎಂದೆಲ್ಲಾ ಸುದ್ದಿಯಾಗಿತ್ತು. ಹಾಗಾಗಿ, ಹಲವು ಮುಖಂಡರು, ತುದಿಗಾಲಿನಲ್ಲಿ ನಿಂತಿದ್ದರು.ಪೊಲೀಸ್ ಇಲಾಖೆಯಲ್ಲಿ ಇದ್ದಿದ್ದರೆ ಇಷ್ಟೊತ್ತಿಗೆ ಡಿವೈಎಸ್ಪಿ ಆಗುತ್ತಿದ್ದೆ, ರಾಜಕೀಯದಲ್ಲಿ ಎಷ್ಟು ದಿನಾಂತ ಹೀಗೇ ಇರಲಿ. ನನಗೆ ಸಚಿವ ಸ್ಥಾನ ಬೇಕೇ ಬೇಕು. ಮಂತ್ರಿ ಸ್ಥಾನ ಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದ್ದರು.ಆದರೆ, ಎಲ್ಲರ ಆಸೆ ಆಕಾಂಕ್ಷೆಗಳು ಸದ್ಯದ ಮಟ್ಟಿಗೆ ಕೊಚ್ಚಿ ಹೋಗಿದೆ. ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆಯನ್ನು ನೀಡಿದ್ದು, ಸಚಿವ ಸಂಪುಟ ವಿಸ್ತರಣೆ ಅಥವಾ ಸಚಿವ ಸಂಪುಟ ಪುನರ್ ರಚನೆ ಸದ್ಯಕ್ಕಿಲ್ಲ ಎಂದಿದ್ದಾರೆ.ಮೂರು ಕ್ಷೇತ್ರಗಳ ಉಪ ಚುನಾವಣೆಯ ಬಹಿರಂಗ ಪ್ರಚಾರ ಮುಗಿದ ನಂತರ, ಸಂಪುಟ ವಿಸ್ತರಣೆಯ ಯಾವ ಪ್ರಪೋಸಲ್ ನನ್ನ ಮುಂದಿಲ್ಲ. ಬಿ.ನಾಗೇಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎನ್ನುವ ವಿಚಾರ ನನ್ನ ಮುಂದಿದೆ. ಈ ಬಗ್ಗೆ ನಿರ್ಧರಿಸುತ್ತೇನೆ ಎಂದು ಅಂದೇ ಸಿದ್ದರಾಮಯ್ಯ ಹೇಳಿದ್ದರು. ಆದರೂ, ಮಾಧ್ಯಮಗಳಲ್ಲಿ ಸಂಪುಟ ವಿಸ್ತರಣೆಯ ಗುಲ್ಲೆಬ್ಬಿತ್ತು."ಸಂಪುಟ ವಿಸ್ತರಣೆಯ ಸಂದರ್ಭ ಬಂದಾಗ ಆಗುತ್ತದೆ. ಈಗ ಆ ಸಂದರ್ಭ ಒದಗಿ ಬಂದಿಲ್ಲವಲ್ಲ. ಒಂದು ಸಚಿವ ಸ್ಥಾನ ಖಾಲಿ ಇದ್ದು ಅದನ್ನು ತುಂಬುವ ಬಗ್ಗೆ ಚರ್ಚೆ ನಡೆದಿಲ್ಲ" ಎಂದು ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಹೇಳಿದ್ದಾರೆ."ಸಂಪುಟ ಪುನಾರಚನೆ, ವಿಸ್ತರಣೆ ಕುರಿತಂತೆ ರಾಹುಲ್ ಗಾಂಧಿ ಅಥವಾ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ಮಾಡಿಲ್ಲ. ನಾಗೇಂದ್ರ ಅವರು ಸಂಪುಟಕ್ಕೆ ಸೇರ್ಪಡೆ ಆಗಲಿದ್ದಾರೆ. ಆದರೆ ಈಗಲೇ ಅಲ್ಲ " ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಸ್ಪಷ್ಟನೆಯನ್ನು ನೀಡಿದ್ದಾರೆ.

## ಮಾಧ್ಯಮಗಳೇ ಈ ಬಗ್ಗೆ ಸುದ್ದಿಗಳನ್ನು ಬಿತ್ತರಿಸುತ್ತಿವೆ

ಮಾಧ್ಯಮಗಳೇ ಈ ಬಗ್ಗೆ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಸಂಭವನೀಯ ಸಚಿವರ ಪಟ್ಟಿಯನ್ನೂ ಪ್ರಕಟಿಸುತ್ತಿವೆ. ಹೀಗಾಗಿ ಪುನಾರಚನೆ, ವಿಸ್ತರಣೆ ಕುರಿತಾದ ಪ್ರಶ್ನೆಗಳಿಗೆ ಮಾಧ್ಯಮಗಳೇ ಉತ್ತರಿಸಬೇಕು ಎಂದು ಸಿದ್ದರಾಮಯ್ಯ ಹೇಳುವ ಮೂಲಕ, ಬೇಸರವನ್ನು ವ್ಯಕ್ತ ಪಡಿಸಿದರು.ರಾಜ್ಯ ಗೃಹ ಸಚಿವರಾದಿಯಾಗಿ ಸಂಪುಟ ವಿಸ್ತರಣೆಯ ಬಗ್ಗೆ ಪ್ರತಿಕ್ರಿಯೆಯನ್ನು ನೀಡಿದ್ದರು. ಯಾವ ಖಾತೆ ಬದಲಾಗುತ್ತೋ ಎನ್ನುವುದು ಗೊತ್ತಿಲ್ಲ, ಯಾವ ಖಾತೆ ಸಿಗುತ್ತೆ ಎನ್ನುವುದೂ ಗೊತ್ತಿಲ್ಲ. ಯಾವ ಖಾತೆ ಕೊಟ್ಟರೂ ನಿಭಾಯಿಸುತ್ತೇನೆ ಎಂದು ಡಾ.ಪರಮೇಶ್ವರ್ ಹೇಳಿದ್ದರು.ಕೆಪಿಸಿಸಿ ಅಧ್ಯಕ್ಷ ಗಾದಿಗೆ ನಾನೂ ಆಕಾಂಕ್ಷಿ ಎನ್ನುವ ಸಚಿವ ಕೆ.ಎನ್.ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ಅವರ ಹೆಸರು ಮುನ್ನೆಲೆಗೆ ಬಂದಿರುವ ಬಗ್ಗೆ ಡಿ.ಕೆ.ಶಿವಕುಮಾರ್ ಅವರನ್ನು ಪ್ರಶ್ನಿಸಿದಾಗ, "ಮಾಧ್ಯಮಗಳ ಮುಂದೆ ರಾಜಕೀಯ ಚರ್ಚೆ ಮಾಡುವುದು ಯಾವ ಪಕ್ಷದವರಿಗೂ ಹಾಗೂ ಯಾರಿಗೂ ಸೂಕ್ತವಾದುದಲ್ಲ" ಎಂದು ಅಭಿಪ್ರಾಯಪಟ್ಟರು.




# ದಕ್ಷಿಣ ಭಾರತಕ್ಕೆ ಎಂಟ್ರಿ ಕೊಟ್ಟ ಫೆಂಗಲ್!




ನೈರುತ್ಯ ಬಂಗಾಳ ಕೊಲ್ಲಿಯಲ್ಲಿನ ಹವಾಮಾನ ಫೆಂಗಲ್ ಅನ್ನು ಚಂಡಮಾರುತವನ್ನಾಗಿ ಬೆಳೆಸುವ ಸಾಧ್ಯತೆಯಿದ್ದು, ಭಾರತದ ಪೂರ್ವ ಕರಾವಳಿ ತತ್ತರಿಸುವ ಸಾಧ್ಯತೆಯಿದೆ. ಈಗಾಗಲೇ ಶ್ರೀಲಂಕಾದ ಕರಾವಳಿಯನ್ನು ದಾಟಿರುವ ಫೆಂಗಲ್ ದಕ್ಷಿಣ ತಮಿಳುನಾಡು ಕಡೆ ಸಾಗಿದೆ. ಶ್ರೀಲಂಕಾದಲ್ಲಿ ಟ್ರೈಲರ್ ತೋರಿಸಿರುವ ಫೆಂಗಲ್ ಸೈಕ್ಲೋನ್ ತಮಿಳುನಾಡಿನಲ್ಲಿ ವಿನಾಶಕ್ಕೆ ಕಾರಣವಾಗುವ ಸಾಧ್ಯತೆ ದಟ್ಟವಾಗಿದ್ದು, ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳಿಗೆ ಭಾರತೀಯ ಹವಾಮಾನ ಇಲಾಖೆ ಹೈ ಅಲರ್ಟ್ ನೀಡಿದೆ. ಈಗಾಗಲೇ ತಮಿಳುನಾಡಿನಲ್ಲಿ ಭಾರೀ ಮಳೆ ಶುರುವಾಗಿದ್ದು, ಬೆಂಗಳೂರಲ್ಲೂ ಮಳೆ ಬರುವ ಸಾಧ್ಯತೆ ದಟ್ಟವಾಗಿದೆ.

# "ನಾನು ಹಿಂದುವಾಗಿ ಹುಟ್ಟಿದ್ದೇನೆ ಹಿಂದುವಾಗಿ ಸಾಯಲಾರೆ" ಇದರ ಹಿಂದಿನ ಸತ್ಯ ಇಲ್ಲಿದೆ ನೋಡಿ



ಹಿಂದೂ ಧರ್ಮ ಸುಧಾರಿಸಿಕೊಳ್ಳುವ ಅಂತದಲ್ಲಿ ಇರುವಾಗ ಅನೇಕ ಮೌಲ್ಯಗಳನ್ನು ಮತ್ತು ಅಸ್ಪೃಶ್ಯತೆಯನ್ನ ತನ್ನೊಳಗೆ ತನ್ನ ಮಡಿಲೊಳಗೆ ಇಟ್ಟುಕೊಂಡಿತ್ತು ಆದ್ದರಿಂದ ಬೇಸತ್ತ ಅಂಬೇಡ್ಕರ್ ಅವರು ಈ ಅಸ್ಪೃಶ್ಯತೆಯನ್ನ ಹಿಂದೂ ಧರ್ಮದಿಂದ ಹೋಗಲಾಡಿಸಬೇಕು ಅನ್ನುವ ನಿಟ್ಟಿನಲ್ಲಿ ನಾನು ಹಿಂದುವಾಗಿ ಹುಟ್ಟಿದ್ದೇನೆ ಹಿಂದೂವಾಗಿ ಸಾಯಲಾರೆ ಅನ್ನುವ ಮಾತುಗಳನ್ನ ಹೇಳುತ್ತಾರೆ, ಆಗ ಅಂಬೇಡ್ಕರ್ ಅವರ ಮಾತುಗಳನ್ನು ಕೇಳಿದ ಕೆಲವರು ಮರುದಿನವೇ ಅವರನ್ನು ಕೇಳುತ್ತಾರೆ "ಈಗಲೇ ನಾವು ಕನ್ವರ್ಟ್ ಆಗಿ ಬಿಡೋಣ" ಅಂತ. ಆದರೆ ಅಂಬೇಡ್ಕರ್ ಅವರು ಅದು ಆಗಲ್ಲ " ಈಗಲಾದರೂ ಹಿಂದೂ ಧರ್ಮ ಸುಧಾರಿಸಿಕೊಳ್ಳುತ್ತಾ ಅಂತ ನೋಡೋಣ ಒಂದು 10 20 ವರ್ಷ ನೋಡೋಣ" ಎಂದು ಹೇಳಿದರು, ಅವರು ಹೇಳಿ 10 ರಿಂದ 15 ವರ್ಷಗಳ ನಂತರ ಹಿಂದೂ ಧರ್ಮದಲ್ಲಿ ಅಷ್ಟೇನೂ ಬದಲಾವಣೆಯ ಕ್ರಾಂತಿ ಆಗದೇ ಇರುವುದನ್ನು ಕಂಡ ಅಂಬೇಡ್ಕರ್ ಅವರು ಹಿಂದೂ ಧರ್ಮದಿಂದ ಕನ್ವರ್ಟ್ ಆಗಲು ಯೋಚನೆ ಮಾಡುತ್ತಾರೆ ಇದನ್ನೇ ಬಂಡವಾಳ ಮಾಡಿಕೊಂಡ ಕ್ರಿಶ್ಚಿಯನ್ ಧರ್ಮದ ಅವರ ಕೆಲ ಸ್ನೇಹಿತರು ಸೆಳೆಯಲು ಪ್ರಯತ್ನ ಪಟ್ರು, ಆದರೆ ಆಗಲಿಲ್ಲ ಮುಸ್ಲಿಮರು ಕೂಡ ಪ್ರಯತ್ನ ಪಟ್ಟರು ಆದರೂ ಆಗಲಿಲ್ಲ ಬೇಕಾದಷ್ಟು ಹಣದ ಸಹಾಯ ಮಾಡುತ್ತೇವೆ ಎಂದು ಹೈದರಾಬಾದ್ ನಿಜಾಮ ತನ್ನ ಅನುಯಾಯಿಗಳನ್ನ ಅಂಬೇಡ್ಕರ್ ಅವರ ಬಳಿ ಕಳುಹಿಸುತ್ತಾನೆ ಸುತಾರಾಮ್ ಅಂಬೇಡ್ಕರ್ ಅವರು ಒಪ್ಪುವುದೇ ಇಲ್ಲ,

ಎರಡು ಧರ್ಮಗಳಿಗೆ ಮೊದಲು ನಿಮ್ಮಲ್ಲಿರುವ ಕೆಟ್ಟ ವ್ಯವಸ್ಥೆಯನ್ನು ಕಿತ್ತುಹಾಕಿ ಎಂದು ಖಾರವಾಗಿ ಹೇಳುತ್ತಾರೆ ಡಾ. ಬಿಆರ್ ಅಂಬೇಡ್ಕರ್ ಅವರು.



## ಬುದ್ಧಿವಂತ ದಲಿತರನ್ನು ತುಳಿಯುತ್ತಲೇ ಬಂದಿದೆ ಕಾಂಗ್ರೆಸ್



ನಂತರ ಅವರು ಬೌದ್ಧ ಧರ್ಮವನ್ನು ಸ್ವೀಕಾರ ಮಾಡುತ್ತಾರೆ ಮತ್ತು ಬೌದ್ಧ ವಿಚಾರಧಾರೆಗಳನ್ನು ಹರಡಲು ಬುದ್ಧ ಮತ್ತು ಧಮ್ಮಂ ಅನ್ನುವ ಪುಸ್ತಕ ಬರೆಯುತ್ತಾರೆ,

ಹರಿಜನ್ ಕಾಂಟ್ರಿಬ್ಯೂಷನ್ ಟು ಇಂಡಿಯನ್ ತಾಟ್ ಶಂಕರ್ ಮೂಕಾಶಿಗುಣೇಕರ್ ಮಧ್ಯಯುಗದ ಭಾರತದ ಚಿಂತನೆಗೆ ದಲಿತರ ಕೊಡುಗೆ ಎಷ್ಟು ಅನ್ನುವ ಅದ್ಭುತವಾದ ಗ್ರಂಥವನ್ನು ಬರೆದಿದ್ದಾರೆ ಆದರೆ ಅದನ್ನು ಈ ಕಾಂಗ್ರೆಸ್ ಮತ್ತು ಈ ಜಾತ್ಯತೀತರು ಅನ್ನಿಸಿಕೊಳ್ಳುವವರು ಯಾಕೆ ಹೈಲೈಟ್ ಮಾಡುವುದಿಲ್ಲ ಯಾಕಂದರೆ ಬರೆದವರು ಹಿಂದೂವಾದಿ ಅನ್ನುವ ಕಾರಣಕ್ಕೆ. ಕೇವಲ ಒಂದು ಸಣ್ಣ ಕಾರಣಕ್ಕೆ ಒಂದು ದೊಡ್ಡ ವಿಷಯವನ್ನ ಮುಚ್ಚಿ ಹಾಕುವ ಚಾಳಿ ಈ ಕಾಂಗ್ರೆಸ್ ಗೆ ಆವಾಗಿನಿಂದಲೂ ಕೂಡ ಇದೆ. ಯಾಕೆಂದರೆ ದಲಿತರಲ್ಲಿ ಬುದ್ಧಿವಂತರು ಇದ್ದಾರೆ ಅಂದರೆ ಕಾಂಗ್ರೆಸ್ ,ಸಮಾಜವಾದಿ, ಮಹಿಳಾ ವಾದಿ, ಅಂತ ಏನು ಆವಾಗ ಇದ್ರಲ್ಲ ಅವರಿಗೆ ತಡೆದುಕೊಳ್ಳಲು ಆಗುತ್ತಿರಲಿಲ್ಲ. ಕೇವಲ ದಲಿತರು ತಮ್ಮ ಮಾತು ಮಾತ್ರ ಕೇಳಬೇಕು ಅದು ಏನೆಂದರೆ, ನೀವು ಶೋಷಣೆಗೆ ಒಳಗಾದ ನೀವು ಶೋಷಣೆಗೆ ಒಳಗಾದರಿ ಅನ್ನುವ ಮಾತುಗಳನ್ನ ಮಾತ್ರ ದಲಿತರು ಕೇಳಬೇಕು ಅನ್ನುವುದು ಇವರ ರಾಜಕೀಯ ಬುದ್ಧಿವಂತಿಕೆ, ಈ ರಾಜಕೀಯ ಕಾರಣದಿಂದ ಇಂದು ಕೂಡ ಹಿಂದು ಧರ್ಮದಲ್ಲಿ ದಲಿತರು ಅಸ್ಪೃಶ್ಯತೆ ಅನುಭವಿಸುವಂತಹ ಪರಿಸ್ಥಿತಿ ಉಂಟಾಗುತ್ತಿದೆ,

ಆಗಲೇ ದಲಿತರಲ್ಲಿ ಇದ್ದ ಅನೇಕ ಸಾವಿರಾರು ಬುದ್ಧಿವಂತರು ಅವರ ಮಾತುಗಳು ಹೊರಬಂದಿದ್ದರೆ ಇವತ್ತು ಹಿಂದೂ ಧರ್ಮ ಹಿಮಾಲಯದ ಶಿಖರವೆತ್ತರಕ್ಕೆ ಇರುತ್ತಿತ್ತು ಅದಕ್ಕಾಗಿ ವ್ಯವಸ್ಥಿತವಾಗಿ ಕಾಂಗ್ರೆಸ್ ಅದನ್ನ ತುಳಿಯುವ ತಂತ್ರ ಮಾಡಿತು ಅನ್ನುವುದಕ್ಕೆ ಇಷ್ಟು ಸಾಕ್ಷಿ ಸಾಕಲ್ಲವೆ?.





# ಜೀವ ಜಲ ನೀರನ್ನು ಮಿತವಾಗಿ ಬಳಸಿ ಸಂರಕ್ಷಿಸೋಣ- ಶಿವಮ್ಮ ಜಿ ಪೂಜಾರ್

ನಿಸರ್ಗದತ್ತ ಸಂಪನ್ಮೂಲ ನೀರನ್ನು ಮಿತವಾಗಿ ಬಳಸಬೇಕು. ಮಳೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದು, ಇದರಿಂದ ಅಂತರ್ಜಲ ಕೂಡ ಬತ್ತಿ ಹೋಗುತ್ತಿದೆ. ಕುಡಿಯಲು ನೀರಿಲ್ಲದೇ ಜನರು ಪರದಾಡುವ ಸ್ಥಿತಿ ಬಂದಿದೆ ಎಂದು ಕೋಳೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಿವಮ್ಮ ಜಿ ಪೂಜಾರ್ ರವರು ಹೇಳಿದರು.

ಕೋಳೂರು ಗ್ರಾಮ ಪಂಚಾಯತ್ ಆವರಣದಲ್ಲಿ ನೆಡೆದ ಕೋಳೂರು ಗ್ರಾಮವು 24x7 ನೀರು ಸರಬರಾಜು ಘೋಷಣೆ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಮುಂದಿನ ಪೀಳಿಗೆಗೆ ನೀರಿನ ಅಭಾವ ತಡೆಯಲು ಗಿಡಗಳನ್ನು ಹೆಚ್ಚು ಹೆಚ್ಚು ಬೆಳೆಸಬೇಕು, ನೀರಿನ ಮೂಲಗಳನ್ನು ಸಂರಕ್ಷಣೆ ಮಾಡಬೇಕು.ಗ್ರಾಮಗಳಲ್ಲಿ ಹೆಚ್ಚು ನೀರು ಬಳಕೆಯಾಗುತ್ತಿದೆ. ತ್ಯಾಜ್ಯ ನೀರನ್ನು ಸಂಸ್ಕರಿಸುವ ಮೂಲಕ ಮರುಬಳಕೆ ಮಾಡಬೇಕು.ಆಗ ನೀರಿನ ಕೊರತೆ ತಪ್ಪಿಸಬಹುದಾಗಿದೆ.ನಾನು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮೇಲೆ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳನ್ನ ಗ್ರಾಮ ಪಂಚಾಯತ್ ಸರ್ವ ಸದಸ್ಯರನ್ನ ವಿಶ್ವಾಸಕ್ಕೆ ತೆಗೆದುಕೊಂಡು ನಾವೆಲ್ಲರೂ ಒಗ್ಗಟ್ಟಿನಿಂದ ಕಾರ್ಯವನ್ನ ಮಾಡಿದ್ದೇವೆ. ಹೀಗಾಗಿ ಕೋಳೂರು ಗ್ರಾಮದಲ್ಲಿ ಜನರಿಗೆ ಗ್ರಾಮ ಪಂಚಾಯತ್ ವತಿಯಿಂದ ಈ ಕೆಳಗಿನ ಸೇವೆಯನ್ನು ತಲುಪಿಸಿದ್ದೇವೆ ಎಂದು ಹೇಳಿದರು.

**1) 100% ಕಾರ್ಯಾತ್ಮಕ ಮನೆಯ ಟ್ಯಾಪ್ ಸಂಪರ್ಕಗಳು**
**2) ಪ್ರತಿದಿನಕ್ಕೆ ಕನಿಷ್ಠ 55 ಲೀಟರ್ ನೀರು ಪೂರೈಕೆ**
**3) ದೈನಂದಿನ ಕ್ಲೋರಿನೇಷನ್ ಮತ್ತು BIS 12500:10500,2012 ಮಾನದಂಡಗಳ ಅನುಸರಣೆ**
**4) ಬಾಲತುದಿಯಲ್ಲಿ ಪ್ರತಿ ನಿಮಿಷಕ್ಕೆ ಕನಿಷ್ಠ 9 ಲೀಟರ್ ಒತ್ತಡ**
**5) ಕನಿಷ್ಠ ಮೀಟರ್ ಲಂಬವಾಗಿ ನೀರು ತಲುಪುವಿಕೆ**
**6) ಮೀಟರಿಂಗ : 100% ಕುಟುಂಬಗಳು ಒಳಗೊಂಡಿದೆ**
**7) ನಿರ್ವಹಣಾ ವೆಚ್ಚವನ್ನು ಪೂರೈಸಲು ಮಾಸಿಕ ಸುಂಕ ಸಂಗ್ರಹ**
**8) ನೀರು ಸರಬರಾಜು ಯೋಜನೆಯನ್ನು ನಿರ್ವಹಿಸಲು ಸ್ಥಳೀಯ ಸ್ವ- ಸಹಾಯ ಸಂಘಗಳು.**
**9) ಪಂಚಮಿತ್ರದಲ್ಲಿ ದೂರು ಅಪ್ಲೋಡ್ ಮಾಡಿದ 2 ಗಂಟೆಯೊಳಗೆ ಕುಂದುಕೊರತೆ ಪರಿಹಾರ**
**10)ಅನುಷ್ಠಾನದ ಬೆಂಬಲ ಒದಗಿಸಲು ಗ್ರಾಮ ಪಂಚಾಯತ ಮತ್ತು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ಸಬಲೀಕರಣ ಗೊಳಿಸಲಾಗಿದೆ**

ನಂತರ ಕೊಪ್ಪಳ ಸಂಸದರಾದ ಕೆ ರಾಜಶೇಖರ್ ಹಿಟ್ನಾಳ್ ಮಾತನಾಡಿ,ನೀರು ಜೀವನಾವಶ್ಯಕ ಹಾಗೂ ಜೀವರ ರಕ್ಷಕವಾಗಿದ್ದು, ಇದನ್ನು ಮಿತ ಬಳಕೆ ಮಾಡುವ ಮೂಲಕ ಉಳಿಸಬೇಕಿದೆ. ವಾತಾವರಣದಲ್ಲಿ ಬದಲಾವಣೆ, ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಅಂತರ್ಜಲ ಕುಸಿಯುತ್ತಿದೆ. ಪ್ರಾಕತಿಕ ಸಂಪತ್ತನ್ನು ಉಳಿಸುವ ಮೂಲಕ ಉತ್ತಮ ಮಳೆ ಬರುವಂತೆ ಮಾಡಬೇಕಿದೆ ಎಂದರು.ಹಾಗೂ ಕೋಳೂರು ಗ್ರಾಮ ಪಂಚಾಯತ್ ಅಧ್ಯಕ್ಷರು ಸೇರಿದಂತೆ ಎಲ್ಲರ ಕಾರ್ಯ ಮೆಚ್ಚುವಂಥದ್ದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾಗಿಯಾದ ಕೊಪ್ಪಳ ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ರತ್ನಂ ಪಾಂಡೆಯ ಮಾತನಾಡಿ, ಶಾಲಾ ಮಕ್ಕಳು ನೀರು ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಾಗಬೇಕಾಗಿದೆ. ಸಾರ್ವಜನಿಕರು ಗ್ರಾಮ ಪಂಚಾಯತ್ ಅನುದಾನದ ಅಡಿಯಲ್ಲಿ ಶೌಚಾಲಯ ನಿರ್ಮಿಸಿಕೊಂಡು ಸ್ವಚ್ಛತೆ ಕಾಪಾಡಬೇಕು, ಹಾಗೂ ನೀರನ್ನು ಇತಿ-ಮಿತಿಯಲ್ಲಿ ಬಳಸಿಕೊಂಡು ಗ್ರಾಮಗಳ ಅಭಿವೃದ್ಧಿ ಹಾಗೂ ಸ್ವಚ್ಛತೆಯನ್ನ ಕಾಪಾಡಬೇಕು ಎಂದು ಗ್ರಾಮಸ್ಥರಿಗೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಆತ್ಮಾನಂದ ಭಾರತಿ ಸ್ವಾಮಿಜಿ,
ಕೊಪ್ಪಳ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ,ಜಲಜೀವನ್ ಕೋ ಆರ್ಡಿನೆಟರ್ ಮನು, ಪಿಲ್ಡ್ ಬ್ಯಾಂಕ್ ನ ಸಂಜಯ ಶುಕ್ಲಾ, ಅಪೇಕ್ಷಾ ಭಟ್, ಕೊಪ್ಪಳ ಕಾರ್ಯಪಾಲಕ ಅಭಿಯಂತರ ಮಹೇಶ ಶಾಸ್ತ್ರೀ, ಕೊಪ್ಪಳ ಕಾಂಗ್ರೆಸ್ ಪಕ್ಷದ ಪ್ರಭಾವಿ ಮುಖಂಡರಾದ ಗಾಳೆಪ್ಪ ಪೂಜಾರ,ಕೋಳೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶಿವಪ್ಪ ಜಿ ಕಾತರಕಿ,ಗ್ರಾಮ ಪಂಚಾಯತ್ ಸದಸ್ಯರಾದ ಮೈಲಾರಪ್ಪ, ಹನುಮಂತಪ್ಪ ಕರೆಕುರಿ, ಗೌರಮ್ಮ, ಲಕ್ಕಮ್ಮ, ಮಾರುತಿ ವಾಲಿಕಾರ ಇನ್ನಿತರರು ಇದ್ದರು. ಕಾರ್ಯಕ್ರಮವನ್ನು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಶೇಖರಪ್ಪ ನಿರ್ವಹಿಸಿದರು.